# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole  Vol XXXIII - 4  April 2015

PAGES 12



V. RAMABHADRA
1937 - 2015

ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷರಾದ ವಿ. ರಾಮಭದ್ರ ಅವರಿಗೆ
ನಮ್ಮ ಭಾವಪೂರ್ಣ ನುಡಿನಮನ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಅಸೋಸಿಯೇಶನ್‌ನಲ್ಲಿ 'ಪಾಕಶಾಸ್ತ್ರ ಪ್ರಾವೀಣ್ಯ ಸ್ಪರ್ಧೆ'ಮತ್ತು ಸಾಂಸ್ಕೃತಿಕ ದಿನಾಚರಣೆ

ಮೈಸೂರು ಅಸೋಸಿಯೇಷನ್ನಿನಲ್ಲಿ ದಿನಾಂಕ ೧೪.೦೩.೨೦೧೫ ರಂದು ಜಾಗತಿಕ ಮಹಿಳೆಯ ದಿನದ ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಚರಿಸಲಾಯಿತು.

ಎನ್.ಕೆ.ಇ.ಎಸ್ ಶಾಲೆಯ ಮಕ್ಕಳು ಹಾಗೂ ಉಪಾಧ್ಯಾಯರು



ಎನ್.ಕೆ.ಇ.ಎಸ್ ಶಾಲೆಯ ಮಕ್ಕಳು ತ್ಯಾಜ್ಯ ವಸ್ತುಗಳಿಂದ ತಯಾರಿಸಿದ ವಿವಿಧ ದಿನದ ದಿನದ ಉಪಯೋಗದ ವಸ್ತುಗಳು

ಬಹುಶಃ ತ್ಯಾಜ್ಯ ವಸ್ತುಗಳಿಂದ ತಯಾರಿಸಿದ ವಿವಿಧ ದಿನದ ದಿನದ ಉಪಯೋಗದ ವಸ್ತುಗಳನ್ನು ಪ್ರದರ್ಶಿಸಿದರು. ಅದಲ್ಲದೆ painting,



*ಪಾಕಶಾಸ್ತ್ರ ಪ್ರಾವೀಣ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀಮತಿ ಅನುಸೂಯ ಅಯ್ಯಂಗಾರ್ ಅವರು ಅಧ್ಯಕ್ಷರಿಂದ ಬಹುಮಾನ ಸ್ವೀಕರಿಸಿದರು.*

ಕಾಗದದಿಂದ ಮಾಡಿದ ಚಿತ್ತಾರದ ಹೂಗಳು, night lamp ಇತ್ಯಾದಿ. ಎಲ್ಲರೂ ಅದನ್ನು ನೋಡಿ ಆನಂದಿಸಿದರು. ಹಾಗೆಯೇ ಕೆಲವರು ಕೊಂಡುಕೊಂಡರು.

ಮಹಿಳೆಯರಿಗಾಗಿ ಅಡುಗೆಯ ಸ್ಪರ್ಧೆ ಏರ್ಪಡಿಸಲಾಗಿತ್ತು. ಅಕ್ಕಿ ಕಾಳಿನಿಂದ ಮಾಡಿದ ಸಿಹಿ ಹಾಗು ಕಡಲೆ ಬೇಳೆಯಿಂದ ಮಾಡಿದ ಖಾರದ ಪದಾರ್ಥಗಳನ್ನು ಮನೆಯಲ್ಲಿ ಮಾಡಿಕೊಂಡು ಬರಲಿಕ್ಕೆ ಹೇಳಿದ್ದರು. ಬಹಳಷ್ಟು ಮಹಿಳೆಯರು ತಮ್ಮ ಸಾಂಸ್ಕೃತಿಕ ಉಡುಪಿನಲ್ಲಿ ಬಂದು, ತಾವು ಮಾಡಿ ತಂದ ಪದಾರ್ಥಗಳನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ಸಿಹಿ ವಿಭಾಗದಲ್ಲಿ ಸೌ॥ ಅನಸೂಯಾ ಅಯ್ಯಂಗರ್ ಹಾಗೂ ಸೌ॥ ಪೂರ್ಣಿಮಾ ನಾಯಕ ಬಹುಮಾನ ಹಂಚಿಕೊಂಡರೆ, ಖಾರದ ವಿಭಾಗದಲ್ಲಿ ಸೌ॥ ವೀಣಾ ಜೋಶಿ, ಸೌ॥ ಅನಸೂಯ ಅಯ್ಯಂಗಾರ್ ಬಹುಮಾನವನ್ನು ತಮ್ಮದಾಗಿಸಿಕೊಂಡರು. ತಮ್ಮ ತಮ್ಮ ಸಾಂಸ್ಕೃತಿಕ ಉಡುಪಿನಲ್ಲಿ ಬಂದ ಗಂಡಸರು ಮಾತ್ರ ತಿಂಡಿ ಮಾಡಿಕೊಂಡು ಬಂದ ಹೆಂಗಸರಿಗೆ ಇಡದ ಹಾಗೆ ಎಲ್ಲವನ್ನೂ ತಿಂದು ಮುಗಿಸಿದರು.

ಸಾಂಸ್ಕೃತಿಕ ಉಡುಪಿನ ಸ್ಪರ್ಧೆಯಲ್ಲಿ ಶ್ರೀ ಸುಧಾಕರ ಗಂಡಸರ ವಿಭಾಗದಲ್ಲಿ ಬಹುಮಾನ ಗೆದ್ದುಕೊಂಡರೆ, ಮಹಿಳೆಯರ ವಿಭಾಗ್ದಲ್ಲಿ ಸೌ॥ ವೀಣಾ ಜೋಶಿ ಬಹುಮಾನ ಪಡೆದುಕೊಂಡರು.

Lucky draw ಸ್ಪರ್ಧೆಯಲ್ಲಿ ಶ್ರೀ ನಾಯಕ ಗೆದ್ದರು. ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷೆ ಶ್ರೀಮತಿ ಕಮಲಾ ಅವರು ಮಾತನಾಡಿ, ಜಾಗತಿಕ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಮಾನ, ಭಾರತೀಯ ಮಹಿಳೆಯರ ಸಾಧನೆ, ಕೀರ್ತಿ, ಸನ್ಮಾನದ ಬಗ್ಗೆ ಹೇಳಿದರು. (ಅದು ತಮ್ಮ ಕುಟುಂಬವನ್ನು ಸಮರ್ಥವಾಗಿ ನಿಭಾಯಿಸುತ್ತಾ).

ಡಾ॥ ಮಂಜುನಾಥ ಅವರು ಮಾತನಾಡಿ, ತಾಯಿಯೇ ಅತಿ ಶ್ರೇಷ್ಠ ಮಹಿಳಾ ಸಾಧಕಿ



*ಪಾಕಶಾಸ್ತ್ರ ಪ್ರಾವೀಣ್ಯ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಶ್ರೀಮತಿ ವೀಣಾ ಜೋಶಿ ಅವರು ಅಧ್ಯಕ್ಷರಿಂದ ಬಹುಮಾನ ಸ್ವೀಕರಿಸಿದರು.*



*ಸಾಂಸ್ಕೃತಿಕ ದಿನಾಚರಣೆಯ ಸಂದರ್ಭ ಮಕ್ಕಳ ಹಸ್ತಕಲಾ ಪ್ರದರ್ಶನದ ವೇಳೆಯಲ್ಲಿ ಅವರ ಗುರುಗಳು ಮಾಡಿದ ವ್ಯಕ್ತಿ ಚಿತ್ರಣ.*

(ಪುಟ 12ಕ್ಕೆ)

# ನೇಸರು

ತಿಂಗಳೋಲೆ

**ಸಂಪುಟ 32** | **ಎಪ್ರಿಲ್ 2015** | **ಸಂಚಿಕೆ 4**



ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖



ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email : mysoreassociation.mumbai@gmail.com

Website : www.mysoreassociation.in


# ಭಾವಪೂರ್ಣ ನುಡಿನಮನ

ನಾನು ಮುಂಬಯಿಗೆ ಬಂದ ಹೊಸತರಲ್ಲಿ ಮೈಸೂರು ಅಸೋಸಿಯೇಷನ್ ಎನ್ನುವ ಸಂಸ್ಥೆ ಇತ್ತೆಂಬುದು ಕೇಳಿ ಗೊತ್ತೇ ವಿನಃ ನೋಡಿ ಗೊತ್ತಿರಲಿಲ್ಲ. ಎಂ.ಎ. ಮಾಡುತ್ತಿರುವಾಗ ಮೈಸೂರು ಅಸೋಸಿಯೇಷನ್‌ನಲ್ಲಿ ನಡೆದ ಡಾ. ಚಿದಾನಂದಮೂರ್ತಿಯವರ ದತ್ತಿ ಉಪನ್ಯಾಸದಲ್ಲಿ ಭಾಗವಹಿಸಿದ್ದೆ. ಎಂ.ಎ ಮುಗಿದ ನಂತರ ಅಲ್ಲಿ ಕೆಲಸಕ್ಕೆ ಸೇರಿದ ಮೇಲೇನೇ ನಾನು ಸರಿಯಾಗಿ ನೋಡಿದ್ದು. ನನ್ನ ವೃತ್ತಿ ಜೀವನ ಶುರುವಾಗಿದ್ದೇ ಮೈಸೂರು ಅಸೋಸಿಯೇಶನ್‌ನಿಂದ. ಹಾಗಾಗಿ ನಾನು ಆ ಸಂಸ್ಥೆಗೆ ಎಂದೆಂದಿಗೂ ಚಿರಋಣಿ. ಅಲ್ಲಿಯ ಸದಸ್ಯರನ್ನು ನೋಡಿದಾಗಲೆಲ್ಲ ಮನಸ್ಸಿಗೆ ಮುದ ನೀಡುತಿತ್ತು. ಯಾಕೆಂದರೆ ಹೆಚ್ಚಿನವರು ಇಳಿವಯಸ್ಸಿನವರು. ಕಾರ್ಯಕ್ರಮದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ನೋಡಿದರೆ ನಮ್ಮಂತಹ ಯುವಜನತೆ ನಾಚಿಕೊಳ್ಳಬೇಕು.

ಆ ಸಂದರ್ಭದಲ್ಲಿ ನಾನು ಆವಾಗಿನ ಅಸೋಸಿಯೇಷನ್‌ನ ಅಧ್ಯಕ್ಷರಾದ ವಿ. ರಾಮಭದ್ರ ಅವರನ್ನು ನೋಡಿದ್ದು. ಎತ್ತರವಾದ, ಗಂಭೀರ ಮುಖವದನರಾಗಿರುವ ಇವರನ್ನು ಮೇಲ್ನೋಟಕ್ಕೆ ತುಂಬ ಗಡಸು ವ್ಯಕ್ತಿತ್ವದವರು ಎಂದು ತಿಳಿದುಕೊಂಡಿದ್ದೆ. ಆದರೆ ಅವರು ಜನರನ್ನು ಆತ್ಮೀಯತೆಯಿಂದ ಮಾತನಾಡಿಸುವ ಪರಿಗೆ ಮೆಚ್ಚಿಕೊಂಡಿದ್ದೆ. ಮೊದಲಬಾರಿಗೆ ಮೇನೇಜರ್ ಮಧುಸೂದನ್ ಅವರು ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟರು. ಕಾರ್ಯಕಾರಿ ಸಮಿತಿಯ ಪದಾಧಿಕಾರಿ ಮಂಜು ದೇವಾಡಿಗರ ಸೊಸೆ ಎಂದ ಕೂಡಲೆ ಹೌದೇನಮ್ಮ, ಎಂ. ಎ. ಯಲ್ಲಿ ಗೋಲ್ಡ್ ಮೆಡಲ್ ಪಡೆದಿರುವ ನಿಮ್ಮಂತವರು ಇಲ್ಲಿ ನಮ್ಮೊಂದಿಗಿರುವುದು ತುಂಬ ಸಂತೋಷ. ಅದೂ ಅಲ್ಲದೆ ಕಾರಂತರ ಬಗ್ಗೆ ಪಿಎಚ್ ಡಿ ಕೂಡ ಮಾಡ್ತಾ ಇದ್ದೀಯ ಒಳ್ಳೆದು. ಕೆಲಸ ಮತ್ತು ವಿದ್ಯಾಭ್ಯಾಸವನ್ನು ಎರಡನ್ನೂ ಜೊತೆಯಾಗಿ ನಡೆಸಿಕೊಂಡು ಹೋಗುತ್ತಿದ್ದಿಯಾ, ಒಳ್ಳೆಯದು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ನಾನು ಕೂಡ ಸಾಹಿತಿಯ ಮನೆಯಿಂದ ಬಂದವನು, ಮಾಸ್ತಿ ಅವರ ಮೊಮ್ಮಗ ನಾನು ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದರು. ತಾತನ ಬಗ್ಗೆ ಮಾತನಾಡುವಾಗ ಅವರು ಎಷ್ಟೊಂದು ಉದ್ವೇಗಕ್ಕೆ ಒಳಗಾಗುತ್ತಿದ್ದರಂದರೆ, ಅವರ ಅನುಮತಿಯಿಲ್ಲದೆ ಮಾಸ್ತಿಯವರ ಲೇಖನವನ್ನು ಎಲ್ಲಿಯಾದರೂ ಪ್ರಕಟಿಸಿದ್ದು ತಿಳಿದು ಬಂದರೆ ಸಿಡಿದೇಳುತ್ತಿದ್ದರು. ಜೊತೆಗೆ ಪ್ರೀತಿಯಿಂದ ಇನ್ನು ಮುಂದೆ ಅಂತಹ ತಪ್ಪು ನಡೆಯಬಾರದು, ನಾವು ತಾತನ ಹೆಸರಿನಲ್ಲಿ ಸ್ಥಾಪಿಸಿದ ಟ್ರಸ್ಟ್‌ನ ಅನುಮತಿ ಪಡೆದೇ ಪ್ರಕಟಿಸಬೇಕೆಂದು ಸಮಾಧಾನದಿಂದ ತಿಳಿ ಹೇಳುತ್ತಿದ್ದರು ಕೂಡ.

ರಾಮಭದ್ರ ಅವರದು ಮಗುವಿನಂತಹ ಮನಸು. ಕಲ್ಮಶ, ಕಪಟವಿಲ್ಲದ ನೇರ ವ್ಯಕ್ತಿತ್ವ. ತನ್ನ ಮನಸ್ಸಿಗೆ ಹಿಡಿಸದಿದ್ದರೆ ಅದನ್ನು ಅಲ್ಲಿಯೇ ಪ್ರತಿಭಟಿಸುತ್ತಿದ್ದರು. ಮಕ್ಕಳನ್ನು ಮಗು ಎಂದೇ ಸಂಬೋಧಿಸಿ ಕರೆಯುತ್ತಿದ್ದರು. ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷರಾಗಿ ಆಯ್ಕೆಯಾದಾಗ ಅಸೋಸಿಯೇಷನ್‌ನ ಏಳಿಗೆಗಾಗಿ ಅನೇಕ ರೀತಿಯ ಯೋಜನೆಗಳನ್ನು ಹಾಕಿಕೊಂಡು, ಅದರ ಹಿಂದೆ ಅವಿರತವಾಗಿ ದುಡಿದವರು. ತಮ್ಮ ಹಲವಾರು ವರ್ಷದ ವೃತ್ತಿ ಅನುಭವವನ್ನು ಇಲ್ಲಿ ಧಾರೆಯೆರೆದಿದ್ದರು. ಇದ್ದುದರಲ್ಲಿ ಹೊಸ ನಾವೀನ್ಯತೆಯನ್ನು ಸೃಷ್ಟಿ ಮಾಡಿ ಅದನ್ನು ಹೇಗೆ ಬಳಕೆ ಮಾಡಬಹುದು ಎನ್ನುವುದನ್ನು ಶ್ರೀ ರಾಮಭದ್ರ ಅವರು ಚೆನ್ನಾಗಿ ಅರಿತಿದ್ದರು. ಕೈ ಹಾಕಿದ ಕೆಲಸ ಮುಗಿಯುವ ತನಕ ಸುಮ್ಮನೆ ಕುಳಿತಿರುತ್ತಿರಲಿಲ್ಲ. ಎಲ್ಲರನ್ನೂ ಒಟ್ಟುಗೂಡಿಸಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅವರು ಯತ್ನಿಸುತ್ತಿದ್ದ ಪರಿಗೆ ತಲೆಬಾಗಲೇಬೇಕು. ಹಿರಿಯರು ಕಿರಿಯರೆನ್ನದೆ ಎಲ್ಲರನ್ನೂ ಪ್ರೀತಿಯಿಂದ ನೋಡಿಕೊಳ್ಳುವ ರೀತಿ ಶ್ಲಾಘನೀಯ. ನಾನು ಶ್ರೀ ರಾಮಭದ್ರ ಸರ್‌ನ್ನು ಹತ್ತಿರದಿಂದ ಬಲ್ಲವಳಲ್ಲ. ಅಲ್ಲಿ ಕೆಲಸ ಮಾಡುತ್ತಿರುವಾಗ ದೊರೆತ ಒಡನಾಟದಿಂದ ಅವರ ವ್ಯಕ್ತಿತವದ ಪರಿಚಯ ನನಗಾಯಿತು.

ನಾನು ಅಸೋಸಿಯೇಷನ್ ಬಿಟ್ಟು ಕನ್ನಡ ವಿಭಾಗದಲ್ಲಿ ಸಂಶೋಧನ ಸಹಾಯಕಿಯಾಗಿ ಹೋಗುತ್ತಿದ್ದೇನೆ ಎಂದು ತಿಳಿದಾಗ, ಯಾಕಮ್ಮ ಹೋಗುತ್ತೀಯಾ, ನಿಮ್ಮಂತವರು ಬೇಕು ನಮಗೆ. ಆದರೂ ಇರಲಿ ಬಿಡು ವಿದ್ಯಾಭ್ಯಾಸದ ದೃಷ್ಟಿಯಿಂದ ಹೋಗುತ್ತಿದ್ದೀಯಾ ಅದಕ್ಕೆ ಅನುಮತಿ ಕೊಡುತ್ತಿದ್ದೇನೆ ಎಂದು ಪ್ರೀತಿಯಿಂದ ನುಡಿದಿದ್ದನ್ನು ನಾನು ಯಾವತ್ತೂ ಮರೆಯಕ್ಕಿಲ್ಲ.

ರಾಮಭದ್ರ ಅವರದು ಅಪರೂಪದ ವ್ಯಕ್ತಿತ್ವ. ನಡೆ ನುಡಿಯಲ್ಲಿ ಸ್ನೇಹಶೀಲತೆ ಎದ್ದುಕಾಣುತ್ತಿತ್ತು. ತನಗೆ ಗೊತ್ತಿಲ್ಲದ ವಿಷಯವನ್ನು ತಿಳಿದುಕೊಳ್ಳುವ ಹಂಬಲ ಅವರಲ್ಲಿ ಸದಾ ತುಡಿಯುತ್ತಿತ್ತು. ಒಂದು ರೀತಿಯಲ್ಲಿ ಹೇಳಬೇಕಾದರೆ ನಮ್ಮಂತಹ ಯುವಪೀಳಿಗೆಗೆ ಮಾದರಿಯಾಗಿದ್ದರು. ಇಳಿವಯಸ್ಸಿನಲ್ಲೂ ಅವರು ತೋರುವ ಉತ್ಸುಕತೆ ಮೆಚ್ಚಬೇಕಾದದ್ದು. ಇಂತಹ ಒಂದು ಅಮೂಲ್ಯ ವ್ಯಕ್ತಿತ್ವವನ್ನು ನಾವು ಇತ್ತೀಚೆಗೆ ಕಳೆದುಕೊಂಡಿದ್ದೇವೆ. ಅವರಿಗೆ ನಮ್ಮ ನೇಸರುವಿನ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಮನಸಾ ಹಾರೈಸುವೆ..

**- ಡಾ. ಜ್ಯೋತಿ ಸತೀಶ್**

# ಆಲ್ಬಂ ನೋಡುತ್ತೀರಾ?

✍ ರಮಾ ಉಡುಪ

ಕೆಲಸದಿಂದ ರೀಟೈರ್ ಆದಮೇಲೆ ಮನೆಯಲ್ಲಿ ಆಸ್ಥೆಯಿಂದ ಮಾಡುತ್ತಿರುವ ಕೆಲಸವೆಂದರೆ ಮನೆ ಕ್ಲೀನಿಂಗ್! ಒಂದು ದಿನ ಬಟ್ಟೆಬೀರು, ಮತ್ತೊಂದು ದಿನ ಪುಸ್ತಕದ ಶೆಲ್ಫ್, ಅದಾದ ಮೇಲೆ ಅಡಿಗೆ ಮನೆ ಅಟ್ಟ, ಚಪ್ಪಲಿ ಸ್ಟ್ಯಾಂಡ್, ಶೋಕೇಸು ಹೀಗೆ ಮನೆಯಲ್ಲಿ ಬೇಕಾದಷ್ಟು ಸಾಮಾನುಗಳನ್ನು ತಮ್ಮೊಳಗೆ ಹುದುಗಿಸಿಕೊಂಡಿರುವ ಉಪಕರಣಗಳಿವೆ ಸಾಫ್ ಸಫಾಯಿ ಮಾಡಲು. ನಿನ್ನೆ ಫೋಟೋ ಆಲ್ಬಂಗಳಿದ್ದ ಮೂವತ್ತು ಆಲ್ಬಂ. ಕಳೆದ ಹತ್ತು ಹನ್ನೆರಡು ವರ್ಷದಿಂದ ತೆಗೆದ ಫೋಟೋ ಎಲ್ಲಾ ಸೀದಾ ಕಂಪ್ಯೂಟರ್ ಒಳಗೇ ಹೋಗಿ ಸೇರುತ್ತಿದೆ. ಇಲ್ಲದಿದ್ದರೆ ಇನ್ನೂ ಎಂಭತ್ತು ಆಲ್ಬಂ ಹೆಚ್ಚಿರುತ್ತಿತ್ತೇನೋ. ಅಷ್ಟೊಂದು ಫೋಟೋಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಕಂಪ್ಯೂಟರ್‌ಗೆ ನಮೋ ನಮಿಸಿದೆ.

ನಾನು ಚಿಕ್ಕವಳಿದ್ದಾಗ ನಮ್ಮ ಮನೆಯಲ್ಲಿ ಒಂದೂ ಆಲ್ಬಂ ಇರಲಿಲ್ಲ. ನಮ್ಮ ಮನೆಯಲ್ಲಿ ಮಾತ್ರವಲ್ಲ ಯಾರ ಮನೆಯಲ್ಲೂ ಇರಲಿಲ್ಲ. ಮನೆಯ ಎಲ್ಲಾ ಫೋಟೋಗಳೂ ಗೋಡೆಯ ಮೇಲೆ ತೂಗಾಡುತ್ತಿದ್ದವು. ಮನೆಯ ಹಾಲ್‌ನಲ್ಲಿ ದೇವರ ಫೋಟೋಗಳು. ಪ್ರತೀ ವರ್ಷ ಮನೆಗೆ ಬಂದ ಕ್ಯಾಲೆಂಡರ್‌ಗಳಿಗೆಲ್ಲಾ ಫ್ರೇಮ್ ಹಾಕಿಸಿ ಹೊರಗಡೆ ತೂಗು ಹಾಕುತ್ತಿದ್ದರು. ದೇವರ ಫೋಟೋದ ಕೆಳ ಸಾಲಿನಲ್ಲಿ ಮನೆಯವರ ಫೋಟೋಗಳು. ಮನೆಯ ಹಿರಿಯರದ್ದು ಒಂದೆರಡು ಫೋಟೋ, ಹೊಸದಾಗಿ ಮದುವೆಯಾದಾಗ ತೆಗೆದ ಗಂಡಹೆಂಡತಿಯ ಫೋಟೋ, ಮನೆಯಲ್ಲಿ ಪದವೀಧರರಿದ್ದರೆ ಕಪ್ಪು ಕೋಟು ಹಾಕಿಕೊಂಡು ಕೈಯಲ್ಲೊಂದು ಪೇಪರಿನ ಸುರುಳಿ ಹಿಡಿದುಕೊಂಡ ಫೋಟೋ, ಸಣ್ಣ ಮಕ್ಕಳು ಹುಟ್ಟಿದಾಗ ಐದಾರು ತಿಂಗಳಿನ ಮಗುವನ್ನು ಕೌಚಿ ಮಲಗಿಸಿ ತೆಗೆದ ಫೋಟೋ. ನೀವು ಯಾರ ಮನೆಯಲ್ಲಿ ನೋಡಿ ಇದೇ ತರಹದ ಫೋಟೋಗಳು. ಮನೆಯವರು ಯಾರೂ ನಿಮಗೆ ಫೋಟೋ ನೋಡಿ ಎಂದು ಒತ್ತಾಯಿಸುತ್ತಿರಲಿಲ್ಲ. ನೀವು ಇಷ್ಟವಿದ್ದರೆ ಒಮ್ಮೆ ಕಣ್ಣಾಡಿಸಬಹುದು. ಮದುವೆಯಲ್ಲಿ ಕೂಡಾ ಫೋಟೋ ತೆಗೆಯುವ ಸಂಸ್ಕೃತಿ ಶುರುವಾಗಿರಲಿಲ್ಲ.

ಫೋಟೋ ಆಲ್ಬಂಗಳು ನಮ್ಮ ಊರಿನಲ್ಲಿ ಕಾಲಿಟ್ಟಿದ್ದು ಮದುವೆಗೆ ಆಫಿಶಿಯಲ್ ಫೋಟೋಗ್ರಾಫರ್‌ನನ್ನು ಕರೆಸಲು ಶುರು ಮಾಡಿದ ನಂತರ. ಆಗಿನ್ನೂ ನಿಶ್ಚಿತಾರ್ಥ ಅಥವಾ ಬರ್ತ್‌ಡೇಯಂತಹ ಸಮಾರಂಭಗಳು ಈಗಿನಂತೆ ಅದ್ದೂರಿಯಾಗಿ ಶುರುವಾಗಿರಲಿಲ್ಲ. ಮದುವೆಯಲ್ಲಿ ತೆಗೆದ 30-40 ಫೋಟೋಗಳಲ್ಲಿ ತಮಗೆ ಬೇಕಾದವರಿಗೆ ಕೆಲವು ಕಳಿಸಿ ಉಳಿದುದನ್ನು ಆಲ್ಬಂಗೆ ಹಾಕುವ ಪದ್ಧತಿ ಶುರುವಾಯಿತು. ಮೊದಲು ಬಂದಂತಹ ಆಲ್ಬಂಗಳನ್ನು ನೀವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನು ಹೇಳುತ್ತೇನೆ ಕೇಳಿ. ಮೇಲೆ ಆಕರ್ಷಕವಾದ ಬೈಂಡಿಂಗ್, ಒಳಗೆಲ್ಲಾ ದಪ್ಪ ಕಪ್ಪು ಪುಟಗಳು. ಆ ಕಪ್ಪು ಪುಟಗಳ ಮಧ್ಯೆ ಬಟರ್ ಪೇಪರ್. ಫೋಟೋ ಕಾರ್ನರ್ ಅಂತ ಫೋಟೋಗಳ ನಾಲ್ಕು ತುದಿಗೆ ಅಂಟಿಸಲು ಸಣ್ಣ ಸಣ್ಣ ತ್ರಿಕೋನಾಕಾರದ ತುಂಡುಗಳು ಸಿಗುತ್ತಿದ್ದವು. ಅದನ್ನು ಫೋಟೋದ ತುದಿಗೆ ಸಿಕ್ಕಿಸಿ ನಂತರ ಜಾಗರೂಕತೆಯಿಂದ ಆಲ್ಬಂನಲ್ಲಿ ಅಂಟಿಸಬೇಕಿತ್ತು. ಎಪ್ಪತ್ತರ ದಶಕದಲ್ಲಿ ಹೆಚ್ಚಾಗಿ ಕಪ್ಪು ಬಿಳುಪು ಫೋಟೋಗಳೇ. ನಂತರ ಕಲರ್ ಫೋಟೋಗಳ ಆಗಮನವಾಯಿತು. ಬಣ್ಣ ಬಣ್ಣದ ಫೋಟೋಗು ಕಪ್ಪು ಪುಟದಲ್ಲಿ ಚಂದ ಕಂಡೀತೇ? ಅದಕ್ಕೆ ಸರಿಯಾಗಿ ಆಲ್ಬಂನ ಸ್ವರೂಪವು ಬದಲಾಯಿತು. ಮೊದಲಿಗೆ ಬಿಳಿಯ ದಪ್ಪ ಹಾಳೆಗಳು. ಅದರ ಮೇಲೆ ಮುಚ್ಚಲು ತೆಳುವಾದ ಪ್ಲಾಸ್ಟಿಕ್ ಹಾಳೆಗಳು. ಈ ಆಲ್ಬಂಗಳಲ್ಲಿ ಫೋಟೋ ಕಾರ್ನರ್‌ನ ಅಗತ್ಯವಿಲ್ಲ. ಹಾಗಾಗಿ ಫೋಟೋ ಜೋಡಿಸುವುದೂ ಸುಲಭವಾಯಿತು. ಒಂದೆರಡು ಕೊಹಾಕ್ ರೀಲ್‌ನಲ್ಲಿ ತೆಗೆದ ಫೋಟೋಗಳು ಒಂದು ಆಲ್ಬಂನಲ್ಲಿ ತುಂಬುತ್ತಿದ್ದವು. ತೊಂಭತ್ತರ ದಶಕದಲ್ಲಿ ಕೊಹಾಕ್ ರೀಲ್‌ಗಳನ್ನು ಡೆವಲಪ್ ಮಾಡಲು ಕೊಟ್ಟಾಗ ಸ್ಟೂಡಿಯೋದವರೇ ಒಂದು ರೀಲಿನ ಫೋಟೋಗಳನ್ನು ಒಂದು ಸಣ್ಣ ಆಲ್ಬಂನಲ್ಲಿ ಹಾಕಿಕೊಡಲು ಶುರುಮಾಡಿದರು. ಮೊದಲಾದರೆ ಒಳ್ಳೆಯ ಫೋಟೋಗಳನ್ನು ಮಾತ್ರ ಆಯ್ದು ಆಲ್ಬಂಗೆ ಹಾಕುವ ಪರಿಪಾಠವಿತ್ತು. ಆದರೆ, ಸ್ಟುಡಿಯೋದವನೇ ಆಲ್ಬಂಗೆ ಹಾಕಲು ಶುರುಮಾಡಿದ ಮೇಲೆ ನೀವು ಕಣ್ಣು ಮುಚ್ಚಿದರೂ ಸರಿ, ಕತ್ತು ಕೊಂಕಿಸಿದ್ದರೂ ಸರಿ, ಕೆಟ್ಟದಾಗಿ ಹಲ್ಲು ಬಿಟ್ಟಿದ್ದರೂ ಸರಿ ಎಲ್ಲಾ ಫೋಟೋಗಳೂ ಆಲ್ಬಂನಲ್ಲಿ ಆಶ್ರಯ ಪಡೆಯುತ್ತಿದ್ದವು.

ರೀಲುಗಳನ್ನು ಕ್ಯಾಮೆರಾದಲ್ಲಿ ತುಂಬಿಸಿ ಫೋಟೋ ತೆಗೆಯುತ್ತಿದ್ದ ಕಾಲದಲ್ಲಿ ಫೋಟೋ ತೆಗೆಯುವ ಪರಿಣಿತಿ ಇದ್ದವರು ಮಾತ್ರ ಕ್ಯಾಮೆರಾ ಹಿಡಿಯುತ್ತಿದ್ದರು. Learn Photagraphy ಎಂದು ನೂರಾರು ಪುಸ್ತಕಗಳು ಸಿಗುತ್ತಿದ್ದವು. ಆದರೆ, ಈಗ ಡಿಜಿಟಲ್ ಕ್ಯಾಮೆರಾಗಳ ಆವಿಷ್ಕಾರದ ನಂತರ 4-5 ವರ್ಷದ ಮಕ್ಕಳೂ ಕ್ಯಾಮೆರಾ ಹಿಡಿದು ಕ್ಲಿಕ್ಕಿಸುತ್ತಾರೆ. ಕ್ಯಾಮೆರಾದಿಂದ ಸೀದಾ ಕಂಪ್ಯೂಟರ್ ಅಂತರಂಗದೊಳಗೆ ಸೇರುತ್ತವೆ. ಫೋಟೋಗಳು. ಈಗಂತೂ ಎಲ್ಲಾ ಮೊಬೈಲ್‌ಗಳಲ್ಲೂ ಕ್ಯಾಮೆರಾ ಅಡಗಿರುವುದರಿಂದ ಪ್ರತಿಯೊಬ್ಬರೂ ಫೋಟೋಗ್ರಾಫರ್. ಪ್ರತಿ ದಿನವೂ ಫೋಟೋ ಕ್ಲಿಕ್ಕಿಸುತ್ತಲೇ ಇರುತ್ತಾರೆ, Whatsapp ನಲ್ಲಿ ರವಾನಿಸುತ್ತಲೇ ಇರುತ್ತಾರೆ, facebook ನಲ್ಲಿ Update ಮಾಡುತ್ತಿರುತ್ತಾರೆ. ಹಾಗಾಗಿ ಆಲ್ಬಂಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೂ ಮದುವೆ ಅಥವಾ ಬರ್ತ್‌ಡೇಗಳಲ್ಲಿ ಕ್ಷಣಕ್ಷಣವೂ ತೆಗೆದ ಫೋಟೋಗಳನ್ನು ಸುಂದರವಾದ, ಆಕರ್ಷಕವಾದ, ದೊಡ್ಡ ಆಲ್ಬಂನಲ್ಲಿ ಜೋಡಿಸಿ ಅದನ್ನು ಗಟ್ಟಿಮುಟ್ಟಾದ ಸುಂದರ ಬ್ಯಾಗಿನಲ್ಲಿರಿಸಿ ಹತ್ತು ಕೆಜಿಗಿಂತ ಕಡಿಮೆಯಿಲ್ಲದ ಬ್ಯಾಗನ್ನು ನಿಮ್ಮ ಕೈಯಲ್ಲಿರಿಸುತ್ತಾರೆ. ಆ ಹತ್ತು ಕೆಜಿ ತೂಕದ ಆಲ್ಬಂನ ಬೆಲೆ ಎಷ್ಟು ಎಂದು ಕೇಳಬೇಡಿ!. ಇದಿಷ್ಟು ತರಹಾವರಿ ಆಲ್ಬಂಗಳ ವಿಷಯವಾಯಿತು. ಇನ್ನು ಸ್ವಲ್ಪ ಆಲ್ಬಂಗಳನ್ನು ವೀಕ್ಷಿಸಬೇಕಾದವರ ಪರಿಸ್ಥಿತಿಯ ಬಗ್ಗೆ ಹೇಳುತ್ತೇನೆ ಕೇಳಿ. ನೀವೂ ಕೆಲವರು ಅಂತಹ ಸಂಕಟಕ್ಕೆ ತುತ್ತಾಗಿರಲೂ ಬಹುದು.

ನೀವು ಭೇಟಿಯಿತ್ತ ನಿಮ್ಮ ಸ್ನೇಹಿತರ ಮನೆಯಲ್ಲೋ, ನೆಂಟರ ಮನೆಯಲ್ಲೋ ಯಾರದ್ದಾದರೂ ಮದುವೆಯಾಗಿದ್ದರೆ ನಿಮಗೆ ಕಾಫಿ ತಿಂಡಿಗಿಂತ ಮೊದಲು ಆಲ್ಬಂ ದರ್ಶನವಾಗುತ್ತದೆ. ನಿಮ್ಮ ಅಕ್ಕಪಕ್ಕ ಮನೆಯವರೆಲ್ಲಾ ಕುಳಿತು ಪ್ರತಿಯೊಂದು ಫೋಟೋವನ್ನು ವರ್ಣಿಸಿ ಹೇಲುತ್ತಾರೆ. ಫೋಟೋಗಳಲ್ಲಿರುವ ನೂರಾರು ಮಂದಿಯನ್ನು ನಿಮಗೆ ಪರಿಚಯಿಸುತ್ತಾರೆ. ನೀವು ಮಧ್ಯದಲ್ಲಿ ಬಂದು ಪುಟ ಬೇಏಕಂತಲೇ ಎಗರಿಸಿದಿರೋ ಕೂಡಲೇ "ಅಯ್ಯೋ ಒಂದು ಪುಟ ಬಿಟ್ಟಿರಿ" ಎಂದು ಪುನಃ ವಾಪಾಸು ಹಿಂದೆ ತಿರುಗಿಸುತ್ತಾರೆ. ಅರವತ್ತು ಎಪ್ಪತ್ತರ ದಶಕದಲ್ಲಿ ಯಾರ ಮನೆಯಲ್ಲಾದರೂ ಅವರ ಮಕ್ಕಳು ಅಮೇರಿಕಾಕ್ಕೋ ಇಂಗ್ಲೆಂಡ್‌ಗೋ ಹೋಗಿದ್ದರೆ ಅಲ್ಲಿಂದ ಬಣ್ಣದ ಫೋಟೋಗಳನ್ನು ಕಳಿಸುತ್ತಿದ್ದರು. ಓಹ್! ಆ ಬಣ್ಣದ ಫೋಟೋಗಳನ್ನು ತೋರಿಸುವಾಗ ಮನೆಯವರಿಗೆ ಏನು ಹೆಮ್ಮೆ!. ಫಾರಿನ್ನಿನ ಅಂದಚಂದಗಳನ್ನು ಆ ಫೋಟೋಗಳ ಮೂಲಕ ವರ್ಣಿಸಿದಷ್ಟೂ ಮುಗಿಯುತ್ತಿರಲಿಲ್ಲ.

ಇತ್ತೀಚೆಗೆ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಸಿಂಗಾಪುರ, ಹಾಂಕಾಂಗ್, ಬ್ಯಾಂಕಾಕ್, ಥಾಯ್ಲೆಂಡ್ ಪ್ರವಾಸಗಳನ್ನು ಮಾಡಲೇಬೇಕೆನ್ನುವಂತೆ ಕಡ್ಡಾಯವಾಗಿದೆ. ಪರದೇಶದ ನೆಲ ಸೋಂಕುತ್ತಿದ್ದಂತೆಯೇ ಕ್ಯಾಮೆರಾ ಕ್ಲಿಕ್ಕಿಸಲು ಶುರುವಾಗುತ್ತದೆ. ಅಲ್ಲಿಯ ರಸ್ತೆ, ಮರ, ತಂಗಿದ್ದ ಹೋಟೇಲು, ಹೋಟೇಲ್ಲಿನ ರೂಮು, ರೂಮಿನಲ್ಲಿದ್ದ ಹಾಸಿಗೆ, ದಿಂಬು, ಅಲ್ಲಿಯ ಸೋಫಾದಲ್ಲಿ ನಾನಾ ಭಂಗಿಯಲ್ಲಿ ಕುಳಿತು ಒಂದಷ್ಟು ಫೋಟೋ, ಹಾಗೆ ಫಾರಿನ್ನಿನಲ್ಲಿ ಪ್ರತಿಯೊಂದೂ ಅತ್ಯಾಕರ್ಷಕವಾಗಿ ಕಾಣುತ್ತದೆ. ಡಿಜಿಟಲ್ ಕ್ಯಾಮೆರಾವಾದ್ದರಿಂದ ರೋಲ್‌ಗೆ ಹಣ ಕೊಡುವ ತಲೆಬಿಸಿಯಿಲ್ಲ. ಫಾರಿನ್‌ನಿಂದ ವಾಪಾಸು ಬಂದ ಮೇಲೆ ಅಲ್ಲಿಯ ದೃಶ್ಯ ........... ಫೋಟೋಗಳ C.D. ಮಾಡಿ ತಮ್ಮ ಆಪ್ತರಿಗೂ ಹಂಚುತ್ತಾರೆ. ಅಷ್ಟೇ ಅಲ್ಲದೇ ಅಂದಂದಿನ ಫೋಟೋಗಳನ್ನು facebookನಲ್ಲಿ ಹಾಕುತ್ತಾ ಹೋಗುತ್ತಾರೆ. ಅದಕ್ಕೊಂದಷ್ಟು Like ಗಳೂ Comments ಗಳೂ ಬರಲು ಶುರುವಾಗುತ್ತದೆ.

ಹಾಂ! ವಿಷಯ ಎಲ್ಲಿಂದೆಲ್ಲಿಗೋ ಬಂತು. ನಿನ್ನೆಯ ವಿಷಯ ಹೇಳಲು ಮರೆತೇ ಬಿಟ್ಟೆ. 20-30 ಆಲ್ಬಂಗಳನ್ನು ಹೊರ ತೆಗೆದವಳು ಎಲ್ಲಾ ಆಲ್ಬಂಗಳ ಪುಟ ತಿರುಗಿಸಿದೆ. ಸುಮಾರು ಐದಾರು ಘಂಟೆ ಹಿಡಿಯಿತು. ಹಳೆಯ ನೆನಪುಗಳು ಮರುಕಳಿಸಿದವು. ಮನಸ್ಸಿಗೆ ಆಹ್ಲಾದವೆನಿಸಿತು. ಅದರಲ್ಲೂ ಕಪ್ಪು-ಬಿಳುಪು ಫೋಟೋಗಳು ಹೆಚ್ಚು ಮುದಕೊಟ್ಟಿತು. ಆದರೆ, ಮನೆಯಲ್ಲಿ ಬೇರೆ ಯಾರೂ ಆ ಕಪಾಟಿನ ಬಾಗಿಲು ತೆಗೆಯುವುದಿಲ್ಲ. ಎಲ್ಲರಿಗೂ ಆ ಆಲ್ಬಂಗಳು ಅನಾವಶ್ಯಕ ಜಾಗ ತಿಂದಿವೆ ಎನ್ನುವ ಅಭಿಪ್ರಾಯ. ಆದರೆ, ನನ್ನ ಮಟ್ಟಿಗೆ ಕಂಪ್ಯೂಟರ್‌ನಲ್ಲಿ ಅಡಗಿರುವ ಫೋಟೋಗಳಿಗಿಂತ ನನ್ನ ಆಲ್ಬಂನಲ್ಲಿರುವ ಫೋಟೋಗಳೇ ಹೆಚ್ಚು ಪ್ರಿಯ. ■

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
# ವಿದ್ವಾನ್ ಮುತ್ತಯ್ಯ ಭಾಗವತರ್ (ಗಾಯಕರು – ವಾಗ್ಗೇಯಕಾರರು)



1877 ನೇ ಇಸವಿ ನವೆಂಬರ್ ತಿಂಗಳ 15 ರಂದು ಲಿಂಗಂ ಅಯ್ಯರ್ ಆನಂದಂಬಾಳ್ ಎಂಬುವವರ ಸುಪುತ್ರರಾಗಿ ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ತಿರುನೆವ್ವೇಲಿಯಲ್ಲಿ ಜನಿಸಿದರು. ವಿದ್ವತ್ತಿಗೆ ಹೆಸರಾದ ಮನೆತನ. ಇವರ ತಾತನವರು ಸುಬ್ಬಭಾರತಿಯೆಂದು ತಮಿಳು ಹಾಗೂ ಸಂಸ್ಕೃತದ ಉದ್ದಾಮ ಪಂಡಿತರು. ತಂದೆಯವರು ಉತ್ತಮ ಪಂಡಿತರು. ಇವರಿಂದ ಸಾಹಿತ್ಯ ಪಾಠ ನಡೆಯಿತು. ಅಪ್ಪುಕ್ಕುಡಂ ಶಾಸ್ತ್ರಿಗಳೆಂಬುವರು ಸಂಗೀತ ಶಿಕ್ಷಕರು. ತಂದೆಯವರ ಅನಿರೀಕ್ಷಿತ ನಿಧನದಿಂದ ವಿಚಲಿದರಾದ ಇವರ ಪೋಷಣೆಯ ಹೊಣೆಗಾರಿಕೆ ಸೋದರಮಾವನದಾಯಿತು. ಸೋದರಮಾವನ ಆದೇಶದಂತೆ ಸಂಸ್ಕೃತ ವ್ಯಾಸಂಗ ಮಾಡಿದರೂ ಚಿಕ್ಕಂದಿನಿಂದಲೂ ಕೇಳುತ್ತಿದ್ದ ಜಾನಪದ ಗೀತೆಗಳ ನೆನಪು ಇವರಿಗೆ ಕಾಡದೆ ಬಿಡಲಿಲ್ಲ. ಸಂಗೀತದ ಮೇಲಿನ ಒಲವು ಅಧಿಕವಾಗಿ ತಿರುವಯ್ಯಾರಿಗೆ ಪಯಣ. ಅಲ್ಲಿ ವಿದ್ವಾನ್ ಸಾಂಬಶಿವನ್ ಎಂಬುವರಲ್ಲಿ ಶಿಷ್ಯ ವೃತ್ತಿ. ಗುರುಕುಲವಾಸ. ಸುಮಾರು ಆರು ವರುಷಗಳ ಸತತ ಸಾಧನೆಯಿಂದ ಇವರೊಬ್ಬ ವೇದಿಕೆಯ ಕಲಾವಿದರಾದರು. ಸುಖ–ದುಃಖಗಳೆರಡೂ ನಾಣ್ಯದ ಎರಡು ಮುಖವಿದ್ದಂತೆ. ಸುಖದಿಂದ ನಡೆಯುತ್ತಿದ್ದ ಇವರ ಸಂಗೀತ ಕಛೇರಿಗಳಿಗೆ ಅಡಚಣೆಯಾಗುವಂತೆ ಇವರ ಕಂಠಶ್ರೀ ಕೈಕೊಟ್ಟಿತು. ಆದರೆ ಧೃತಿಗೆಡದೆ ಇವರು ಕೀರ್ತನ ಕಲೆಗೆ ವಾಲಿದರು. ಇವರಲ್ಲಿದ್ದ ಸಾಹಿತ್ಯ ಪ್ರಜ್ಞೆ, ಸಂಗೀತ ಸಾಧನೆ, ಜಾನಪದ ಒಲವು ಇವರ ನೆರವಿಗೆ ಬಂದು ಉತ್ತಮ ಕೀರ್ತನಕಾರರಾಗಲು ಸಹಕಾರಿಯಾಯಿತು. ಹೊಸ ಹೊಸ ಕಥೆಗಳಿಗೆ ಹೊಸ ಹೊಸ ಕೃತಿ ರಚನೆಯೊಂದಿಗೆ ಸ್ವಾರಸ್ಯಕರವಾದ ವೈವಿಧ್ಯಮಯ ಕಥಾ ಕೀರ್ತನಕ್ಕೆ ತಮಿಳುನಾಡು ಜನತೆ ಅಪರಿಮಿತ ಪ್ರೋತ್ಸಾಹ ತೋರಿ ಇವರನ್ನು ಆದರಿಂದ ಸ್ವಾಗತಿಸಿತು.

ಜೀವನದ ಜಂಜಾಟದಲ್ಲಿ ಕಷ್ಟ ಸುಖಗಳಿಗೆ ಸಮಪಾಲು. ಅಂತೆಯೇ ಮಗಳ ನಿಧನದಿಂದ ಮನೋಸ್ಥೈರ್ಯಕ್ಕೆ ಆಘಾತವುಂಟಾಯಿತು. ದೇಶ ವಿದೇಶಗಳ ಪರ್ಯಟನ ಕೈಗೊಂಡು ಕಾಶಿ ಸೇರಿದ ಇವರ ಮನ ಹಿಂದೂಸ್ಥಾನೀ ಸಂಗೀತಕ್ಕೂ ಶರಣಾಯಿತು. ಇವರಿಂದ ಮೇಲಿಂದ ಮೇಲೆ ಕೆಲವು ಕೃತಿ ರಚನೆಗಳು ರೂಪುಗೊಂಡು ಇವರೋರ್ವ ಅಸಾಧಾರಣ ವಾಗ್ಗೇಯಕಾರರಾದರು. ನಿರಂತರ ಸಾಧನೆಯಿಂದ ಕಂಠಶ್ರೀ ಮೊದಲಿನ ಇಂಪಿಗೇ ಶರಣಾಯಿತು.

ತ್ಯಾಗರಾಜರ ಮೇಲೆ ಅಪರಿಮಿತವಾದ ಗೌರವ ಮೂಡಲು ಕಾರಣ ಅವರ ಶಿಷ್ಯ ಪರಂಪರೆಗೆ ಸೇರಿದವರಾಗಿದ್ದರು. ಹೀಗಾಗಿ ತ್ಯಾಗರಾಜರ ಆರಾಧನೆಗಳಿಗೆ ಒತ್ತುಕೊಟ್ಟರು. ಇದರೊಟ್ಟಿಗೆ ಅವರ ಕೃತಿಗಳ ಅಧ್ಯಯನ ನಡೆಸಿ ಅದನ್ನು ಆರಾಧನೆಯ ಸಂದರ್ಭದಲ್ಲಿ ಪ್ರಸ್ತುತಪಡಿಸುತ್ತಿದ್ದರು. ಇವರು ಮೈಸೂರಿನ ರಾಜಾಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾದುದು ಒಂದು ವಿಶೇಷ ಸಂದರ್ಭದಲ್ಲಿ. ರಾಜಾಶ್ರಯ ಬಯಸಿದ ಇವರ ಸಂಗೀತವನ್ನು ಕೇಳುವ ಸುಯೋಗ ಚಾಮುಂಡೇಶ್ವರಿ ದೇವಾಲಯದಲ್ಲಿ ಮಹಾರಾಜರಿಗೆ ಲಭಿಸಿತು. ಅಂದು ದೇವಾಲಯದಲ್ಲಿ ಮನದುಂಬಿ ಇವರು ಹಾಡುತ್ತಿದ್ದರು. ಅಲ್ಲಿಗೆ ಅನಿರೀಕ್ಷಿತವಾಗಿ ಆಗಮಿಸಿದ ಮಹಾರಾಜರು ಇವರ ಸಂಗೀತವನ್ನು ಕೇಳುತ್ತ ನಿಂತರು. ಇಂತಹ ಕಲಾವಿದನ ಕಾರ್ಯಕ್ರಮವು ಆಸ್ಥಾನದಲ್ಲೇ ಏಕೆ ನಡೆದಿಲ್ಲವೆಂದು ಅವರನ್ನು ಆಸ್ಥಾನಕ್ಕೆ ಕರೆಸಿ, ಕಛೇರಿ ಮಾಡಿಸಿ, ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿದರು. ಅವರ ಆದೇಶದಂತೆ ಚಾಮುಂಡೇಶ್ವರಿ ಅಷ್ಟೋತ್ತರ ಶತ ನಾಮಾವಳಿಯ ಕೀರ್ತನೆಗಳನ್ನು ರಚಿಸಿದರು. ಕನ್ನಡದ ಈ ರಚನೆ ಬಹು ಅಪರೂಪದ ರಾಗಗಳಲ್ಲಿ ಸಂಯೋಜಿಸಿದೆ. ತೆಲುಗು, ಸಂಸ್ಕೃತ, ಕನ್ನಡ, ತಮಿಳು ಹೀಗೆ ಚತುರ್ಭಾಷೆಗಳಿಂದ ಸುಮಾರು ನಾಲ್ಕು ನೂರು ಕೃತಿಗಳನ್ನು ರಚಿಸಿದ್ದಾರೆ.

ತಿರುವಾಂಕೂರಿನಲ್ಲಿ 'ಸ್ವಾತಿ ತಿರುನಾಳ್ ಸಂಗೀತ ಕಲಾಶಾಲೆ'ಯು ಪ್ರಾರಂಭವಾದ ಮೊದಲ ಪ್ರಾಚಾರ್ಯರು ಇವರೇ. ಸ್ವಾತಿ ತಿರುನಾಳರ ಕೃತಿಗಳ ಬಗ್ಗೆ ಪರಿಷ್ಕಾರಗೊಳಿಸಿ ಅದರ ಒಂದು ಸಂಪುಟವನ್ನು ಹೊರತಂದಿದ್ದಾರೆ. ಇವರ ಎಲ್ಲ ಸಾಧನೆಗಳನ್ನು ಪರಿಗಣಿಸಿ ತಿರುವಾಂಕೂರ್ ವಿಶ್ವವಿದ್ಯಾಲಯವು 1943 ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಇವರು ಗಾಯಕರಾಗಿರುವುದೇ ಅಲ್ಲದೆ ಗೋಟುವಾದ್ಯ ನುಡಿಸುವಿಕೆಯಲ್ಲಿಯೂ ನಿಷ್ಣಾತರು. ಇವರು ದಿನಾಂಕ 30.06.1945 ರಂದು ಕೀರ್ತಿಶೇಷರಾದರು. ■

## ಜೀವಿ ವಚನ

1

ಊರೂರಿಗೆ ಒಂದು ಮನೆ ಇರಬೇಕು ಎನ್ನುತ್ತಾರೆ. ಆದರೆ ಅದು
ಈ ಕಾಲದಲ್ಲಿ ಸಾಧ್ಯವಾಗಲಿಕ್ಕಿಲ್ಲ; ಕಾಲ ಬದಲಾಗಿದೆ, ಎನ್ನಬೇಡಿ.
ಊರಿಗೊಂದು ಮಿತ್ರನ್ನ ಪಡೆಯಬಹುದಲ್ಲ? ಪ್ರಯತ್ನಿಸಿ ನೋಡಿ
ನೀವು ಉತ್ತಮರಾದರೆ, ಉತ್ತಮರು ನಿಮ್ಮನ್ನು ಅರಸಿ ಬರುತ್ತಾರೆ.

2

ಮಿತ್ರರಲ್ಲಿ ಎರಡು ವಿಧ, ಒಂದು ಬಗೆಯ ಮಿತ್ರರು ಸಮಯಸಾಧಕರು
ಹೊಗಳುಭಟ್ಟರು, ತಮ್ಮ ಬೇಳೆ ಬೇಯಿಸಿಕೊಂಡು ಲಾಭಪಡೆವವರು
ಇನ್ನೊಂದು ಬಗೆಯ ಮಿತ್ರರು, ಅಪ್ರಿಯ ಸತ್ಯ ನುಡಿದು ಬುದ್ಧಿಹೇಳುವರು
ನಿಮ್ಮ ತಪ್ಪುಗಳಿಗೆ ತಮ್ಮ ಹೃದಯದ ಕನ್ನಡಿ ಹಿಡಿದು ದಾರಿತೋರುವವರು.

3

ಗೆಳೆಯ ಎಂಥವನಿರಬೇಕೆಂದರೆ, ಅವನು??
ಆಪತ್ಬಾಂಧವನಾಗಿರಬೇಕು
ಗೆಲವುಸೋಲು, ಮಾನಾಪಮಾನ, ಲಾಭಹಾನಿಗಳಲ್ಲಿ ಜೊತೆಗಿರಬೇಕು
ಕಷ್ಟಕಾಲದಲ್ಲಿ ಸದಾ ನಿಮ್ಮನ್ನು ರಕ್ಷಿಸಬೇಕು, ಹಿತೈಷಿಯಾಗಿರಬೇಕು
ಅರ್ಜುನನ ಸಖನಂತೆ, ಅವನು ನಿಮ್ಮ ಜೀವನರಥವ ಓಡಿಸಿರಬೇಕು.

4

ನೀವು ಸುಖದಲ್ಲಿ ತಲ್ಲೀನರಾದಾಗ ದೂರದಿಂದ ನೋಡುತಿದ್ದರು ಕೂಡ
ಕಷ್ಟಕಾಲದಲ್ಲಿ ಧಾವಿಸಿ ನಿಮ್ಮೆಡೆಗೆ ಬರುವವನೆ ನಿಜಮಿತ್ರ, ಪರಮಮಿತ್ರ.
ನಿಮ್ಮ ಸುಖ ವರ್ಧಿಸುವ, ದುಃಖವನು ಅರ್ಧಿಸುವ ಮಿತ್ರನೆ ನಿಜಮಿತ್ರ
ಅಂಥ ಮಿತ್ರರನ್ನು ಸದಾ ನೆನೆಯಬೇಕು, ಎನ್ನಬೇಕು,
'ಮಿತ್ರಾಯನಮಃ'.

–ಡಾ। 'ಜೀವಿ' ಕುಲಕರ್ಣಿ

To,
The Members of the Editorial Committee
Respected friends,

Congratulations, you have enhanced the intrinsic value of NESARU lately. I am inclined to look forward to receive the next edition.

In the article from Dr. 'GV' Kulkarni entitled "ಆರೋಗ್ಯ ಸೂತ್ರಗಳು" there is lot of information to increase the awareness of readers, I feel he will include more information, on "ಆಹಾರ" in the next episode. My feelings on "ಆಹಾರ" are given below: Desires (food for thought) are also an important ಆಹಾರ for human being.

Desire of any individual who adheres to the clean concept of ವ್ಯವಸಾಯ ಬುದ್ಧಿ, ಪ್ರಸಾದ ಬುದ್ಧಿ, ಪರೋಪಕಾರ ಬುದ್ಧಿ will not have disturbance in his brain while one with selfish interest will have only pain to suffer.

I am eager to visit your office during my next visit to Mumbai

**Mr. G.V. Rao**

Mysore

---

ಸಂಪಾದಕರಿಗೊಂದು ಪತ್ರ:

ಮಾನ್ಯರೇ,

ನಮ್ಮಲ್ಲಿ ಅನೇಕ ಸಾಹಿತಿಗಳು, ಸಾಹಿತ್ಯ ಲೋಕಕ್ಕೆ ಬಹಳಷ್ಟು ಮೌಲ್ಯದ ಸಾಹಿತಿಗಳನ್ನು ಧಾರೆ ಎರೆದಿದ್ದಾರೆ. ಈ ಸಾಹಿತಿಗಳಿಂದಾಗಿ ಅದೆಷ್ಟೋ ಸಾಹಿತಿಗಳು ಪ್ರಕಟಗೊಂಡಿದ್ದಾರೆ, ಅಲ್ಲದೆ ಸಾಕಷ್ಟು ಸಾಹಿತ್ಯಗಳನ್ನು ಹೊರತಂದಿದ್ದಾರೆ. ಸಾಹಿತಿಗಳೊಂದಿಗೆ ಕವಿಗಳು, ಕವಯತ್ರಿಯರು, ಕಾದಂಬರಿಕಾರರು, ವಿಭಿನ್ನ ಬರಹಗಾರರು, ಪತ್ರಕರ್ತರು, ವಿಮರ್ಶಕರು, ವಿಶೇಷಕರು, ವಿಶ್ಲೇಷಕರು, ಪುರುಷ ಮತ್ತು ಸ್ತ್ರೀಯರು ಸಾಕಷ್ಟು ಮಂದಿ ಬೆಳೆಯುತ್ತಿದ್ದಾರೆ. ಇದರೊಂದಿಗೆ ಸಾಹಿತ್ಯ ಲೋಕವು ಸಹ ಬೆಳೆಯುತ್ತಿದೆ. ಈ ಸಾಹಿತ್ಯದ ಮತ್ತು ಸಾಹಿತಿಗಳ ಬೆಳವಣಿಗೆಗೆ ಪೋಷಕವಾಗಿ ಹಾಗೂ ಮಾರ್ಗದರ್ಶನಗಳಾಗಿ ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯ, ಸಮಾಜ ಸಂಘಟನೆಗಳು, ಕರ್ನಾಟಕ ಸಂಘ, ಮೈಸೂರು ಅಸೋಸಿಯೇಷನ್ ಇವುಗಳ ಸೇವೆ ವಿಶೇಷವಾಗಿದೆ.

ಇಂತಹ ಸಾಹಿತ್ಯ ಲೋಕದಲ್ಲಿ ಇತ್ತೀಚಿನ ದಿನಗಳಲ್ಲಿ ಎರಡು ಸಾಹಿತಿಗಳನ್ನು ಸಂಸ್ಮರಿಸಿಕೊಳ್ಳುವ ಕಾರ್ಯಕ್ರಮ ಒಂದನ್ನು, ಮೈಸೂರು ಅಸೋಸಿಯೇಷನ್ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಕರ್ನಾಟಕ ಸಂಘ ಮುಂಬಯಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಮಂಡಲಿ ಸಂಯುಕ್ತವಾಗಿ ಆಯೋಜಿಸಿದೆ. ಸಾಹಿತಿಗಳಾದ ಡಾ. ಶಿವರಾಮ ಕಾರಂತ ಮತ್ತು ಯಶವಂತ ಚಿತ್ತಾಲರ ಸಂಸ್ಮರಣಾ ಕಾರ್ಯಕ್ರಮ ಮುಂಬಯಿಯಲ್ಲಿ ನಡೆಸಿದ್ದು ಮುಂಬಯಿ ಸಾಹಿತಿಗಳಿಗೆ ತುಂಬಾ ಉಪಯುಕ್ತವಾಗಿದೆ.

ಎರಡು ದಿನ ನಡೆದ ಈ ಸಂಸ್ಮರಣಾ ಕಾರ್ಯಕ್ರಮದಲ್ಲಿ ಪ್ರಸಿದ್ಧ ಸಾಹಿತಿ ಬೆಂಗಳೂರಿನ ಡಾ.ಎಚ್.ಎಸ್.ರಾಘವೇಂದ್ರ ರಾವ್, ಎಮ್.ಎಸ್.ಆಶಾದೇವಿ, ಡಾ.ಶಿವರಾಮ ಕಾರಂತ ಮತ್ತು ಯಶವಂತ ಚಿತ್ತಾಲರ ಪೂರ್ಣ ಸಾಹಿತ್ಯದ ಪ್ರವಾಸದ ಬಗ್ಗೆ ಬೆಳಕು ಚೆಲ್ಲಿದರು. ಅಲ್ಲದೆ ಅವರ ಕಥೆ ಕಾದಂಬರಿಗಳಲ್ಲಿ ಅಡಗಿರುವಂತೆ ವಿಷಯಗಳನ್ನು ಮೌಲ್ಯಮಾಪನ ಮಾಡಿದರು ಮತ್ತು ಸಾಹಿತಿಗಳ ಮನಸ್ಸುಗಳು ಅವರವರ ಸಾಹಿತ್ಯದಲ್ಲಿ ಹೇಗೆ ಕಂಡು ಬರುತ್ತವೆ ಎಂದು ಬಹಳ ಸೊಗಸಾಗಿ ವಿಮರ್ಶಿಸಿದರು. ಇವರ ಈ ಉಪನ್ಯಾಸವು ಹೊಸ ಲೇಖಕರಿಗೆ ಮತ್ತು ಸಾಹಿತ್ಯದ ವಿದ್ಯಾರ್ಥಿಗಳಿಗೆ ಚೈತನ್ಯವನ್ನು ತುಂಬಿಸಿದಂತಾಗಿತ್ತು.

ಈ ಸಂಪೂರ್ಣ ಕಾರ್ಯಕ್ರಮದಲ್ಲಿ ಡಾ.ರಾವ್ ಕಂಡುಕೊಂಡ ಕಾರಂತರು ಮತ್ತು ಚಿತ್ತಾಲರ ಒಳ ಮತ್ತು ಹೊರ ಸಾಹಿತ್ಯ ಲೋಕವನ್ನು ಮತ್ತೊಮ್ಮೆ ಹೊರತೆಗೆದು ಸ್ಮರಿಸಿದಂತಾಗಿತ್ತು.

ಯಶವಂತ ಚಿತ್ತಾಲರ ಬಗ್ಗೆ ವ್ಯಾಸರಾಯ ನಿಂಜೂರರ ಮಾತುಗಳು ಅಲ್ಲದೆ ಅವರಿಬ್ಬರ ವಿದ್ಯಾರ್ಥಿಯ ಒಡನಾಟ ಹೃದಯ ಸ್ಪರ್ಶಿಸುವಂತಿತ್ತು. ವ್ಯಾಸರಾಯ ನಿಂಜೂರ್‌ರವರು ಚಿತ್ತಾಲರನ್ನು ಬಹಳಷ್ಟು ಅರ್ಥ ಮಾಡಿಕೊಂಡ ಒಬ್ಬ ಒಳ್ಳೆಯ ಸಾಹಿತಿ ಮಿತ್ರರಾಗಿದ್ದರು ಎನ್ನುವುದಕ್ಕೆ ಅವರು ನೆನಪಿಸಿಕೊಟ್ಟ ಅವರ ಬಾಂಧವ್ಯವೇ ಉದಾಹರಣೆಯಾಗಿದೆ.

ಇನ್ನು ಶ್ರೀನಿವಾಸ ಜೋಕಟ್ಟೆ ಚಿತ್ತಾಲರನ್ನು ಸಾಹಿತಿಯಾಗಿ ಕಂಡ ವಿಷಯಗಳನ್ನು ಕಣ್ಣು ಮುಂದೆ ಇಟ್ಟು ಪ್ರದರ್ಶಿಸಿದಂತಾಯಿತು. ಯಶವಂತ ಚಿತ್ತಾಲರ ಲೇಖನಗಳ ಬಗ್ಗೆ ಅವರಿಗೆ ಇರುವ ಕಾಳಜಿ, ಸಾಹಿತ್ಯವನ್ನು ಕನ್ನಡಿಯಂತೆ ಪಾರದರ್ಶಕವಾಗಿ ಪ್ರಸ್ತುತಪಡಿಸುವ ರೀತಿ ಅದರೊಂದಿಗೆ ಅವರ ಉಡುಪು ಹಾಗೂ ಆಹಾರಗಳ ಶಿಸ್ತು ಹೀಗೆ ವಿಭಿನ್ನ ವಿಷಯಗಳ ಬಗ್ಗೆ ಶ್ರೀನಿವಾಸ ಜೋಕಟ್ಟೆ ಉತ್ತಮ ಉಪನ್ಯಾಸ ನೀಡಿದ್ದಾರೆ.

ಯಶವಂತ ಚಿತ್ತಾಲರ ಬಗ್ಗೆ ಸಂಶೋಧನೆ ನಡೆಸಿ ಪಿ.ಎಚ್.ಡಿ. ಪಡೆದ ಲೇಖಕ ಡಾ.ಸುರೇಶ್ ನಾಯ್ಕ್ ಚಿತ್ತಾಲರನ್ನು ಎಷ್ಟು ಸೂಕ್ಷ್ಮವಾಗಿ ಕಂಡುಕೊಂಡಿದ್ದರು. ಅಲ್ಲದೆ ಚಿತ್ತಾಲರ ಬಗ್ಗೆ ಸಂಶೋಧನಾ ಕಾದಂಬರಿ ಬರೆಯಲು ಪಟ್ಟಂತಹ ಅನುಭವವನ್ನು ಸಾಹಿತಿಗಳಲ್ಲಿ ಹಂಚಿಕೊಂಡಿದ್ದು ನವ ಲೇಖಕರಿಗೆ ಉತ್ತಮ ಮಾರ್ಗದರ್ಶನವಾದಂತಿತ್ತು.

ಯಶವಂತ ಚಿತ್ತಾಲರ ಸಾಹಿತ್ಯದಲ್ಲಿ ಅವರ ವಿಚಾರಧಾರೆ ಹೇಗೆ ಇತ್ತೆಂಬುದನ್ನು ಡಾ.ವಿಶ್ವನಾಥ ಕಾರ್ನಾಡ್ ತುಂಬಾ ಚೆನ್ನಾಗಿ ಹೇಳಿದ್ದಾರೆ. ಅದರೊಂದಿಗೆ ಡಾ.ಪಿ.ಚಂದ್ರಿಕಾ, ಡಾ.ಕೆ.ರಘುನಾಥ, ಡಾ.ಜಿ.ಎಸ್.ಉಪಾಧ್ಯ ಅವರು ಯಶವಂತ ಚಿತ್ತಾಲರ ಬಗ್ಗೆ ವಿಭಿನ್ನ ಸಂಗತಿಗಳನ್ನು ವಿಶ್ಲೇಷಿಸಿ ಅವರ ಸಾಹಿತ್ಯ ಜನಪ್ರಿಯವಾಗಲು ಬೇಕಾದ ಮೌಲ್ಯವೇನೆಂದು ತಿಳಿಸಿದರು.

ಸಂಪೂರ್ಣವಾಗಿ ಈ ಎರಡು ದಿನ ನಡೆದ ಕಾರ್ಯಕ್ರಮ ಮುಂಬಯಿ ಸಾಹಿತ್ಯ ಲೋಕಕ್ಕೆ ದೊರಕಿದ ಒಂದು ಅಮೂಲ್ಯ ಕೊಡುಗೆಯಾಗಿದ್ದಿತು.

– ಪ್ರಭಾಕರ ದೇವಾಡಿಗ, ವಾಶಿ.

---

## ಆಕ್ಷೇಪ



ನೋಡದಿರು ನೀ ಹೀಗೆ
ಚೆಲುವ ತುಂಬಿದ ಮೊಗವನು
ಮಾಸಿ ಹೋದೀತು ಚೆಲುವು

ಕಾಡದಿರು ನೀ ಹೀಗೆ
ಮುಗ್ಧ ಮನಸನ್ನು
ಘಾಸಿಗೊಂಡೀತು ಮನವು

ಒಡೆಯದಿರು ನೀ ಹೀಗೆ
ಸುಕೋಮಲ ಹೃದಯವನು
ಭಗ್ನವಾದೀತು ಹೃದಯ

ಕಾಯದಿರು ನೀ ಹೀಗೆ
ಮರಳಿ ಬಾರದವರನ್ನು
ಕಳೆದುಹೋದೀತು ಅಮೂಲ್ಯ ಸಮಯ

ತೊರೆಯದಿರು ನೀ ಹೀಗೆ
ಆತ್ಮೀಯತೆ ತುಂಬಿದವರನ್ನು
ಜೀವನವಾದೀತು ಯಾತನಾಮಯ

ಪ್ರಯತ್ನಿಸದಿರು ನೀ ಹೀಗೆ
ಕೈಗೆಟುಕದ ಮರೀಚಿಕೆಯನು
ಬತ್ತಿ ಹೋದೀತು ಛಲವು

ಪ್ರೀತಿಸದಿರು ನೀ ಹೀಗೆ
ನೆನಪು ಯಾತನಾಮಯವಾಗುವಂತೆ
ಕಷ್ಟವಾದೀತು ಇರವು.

**– ಅನಿತಾ ಪಿ. ಪೂಜಾರಿ, ತಾಕೊಡೆ**

# ಶ್ರೀ ರಾಮಭದ್ರ – ಒಂದು ನುಡಿನಮನ



ಶ್ರೀ ರಾಮಭದ್ರ ಅವರೊಂದಿಗೆ ನನ್ನ ಒಡನಾಟ ಸುಮಾರು ಆರು ವರ್ಷಗಳಿಂದ ಅಸೋಸಿಯೇಷನ್ನಿನ ವ್ಯವಸ್ಥಾಪಕ ಮಂಡಳಿಯಲ್ಲಿ ನಾವಿಬ್ಬರೂ ಇದ್ದೆವು. ಅವರು ಅಧ್ಯಕ್ಷರು, ನಾನು ಸದಸ್ಯ.

ಶ್ರೀರಾಮಭದ್ರ ಮೂಲತಃ ಸಿವಿಲ್ ಎಂಜಿನಿಯರಿಂಗ್ ಹಿನ್ನೆಲೆಯಲ್ಲಿ construction ಕಂಪನಿಯೊಂದರಲ್ಲಿ ಹಿರಿಯ ಅಧಿಕಾರಿಯಾಗಿ ನಿರ್ವಹಿಸಿ ನಿವೃತ್ತರಾದವರು. ಅವರ ಅದೇ ಪ್ರವೃತ್ತಿ ಅಸೋಸಿಯೇಷನ್ನಿನಲ್ಲಿಯೂ ಕಂಡುಬರುತ್ತಿತ್ತು.

ಅಸೋಸಿಯೇಷನ್ನನ್ನು ಬಲಪಡಿಸುವುದು ಹೇಗೆ, ಅಭಿವೃದ್ಧಿಗೊಳಿಸುವುದು ಹೇಗೆ? ಎಂಬ ಬಗ್ಗೆ ಬಹಳಷ್ಟು ಯೋಜನೆಗಳನ್ನು ಅವರು ಹಾಕಿಕೊಂಡಿದ್ದರು. ನಮ್ಮ ಮೊದಲನೇ ಅಂತಸ್ತಿನ ಜಾಗವನ್ನು ಸಂಪೂರ್ಣ ಪುನರ್ರೂಪಿಸಿ, ಅದರಲ್ಲಿ ಒಂದು ಸಣ್ಣ ಮಿನಿ ಸಭಾಗೃಹ ಕಟ್ಟುವ ಯೋಜನೆ ಹಾಕಿ, ಅದಕ್ಕಾಗಿ ಒಬ್ಬ ಕನ್ಸಲ್ಟಂಟ್ ಮುಖಾಂತರ ನಕ್ಷೆ ಮಾಡಿಸಿ, ವಿವರಗಳನ್ನು ಪಟ್ಟಿ ಮಾಡಿಸಿ, ಒಟ್ಟೂ ಖರ್ಚು ಅಂದಾಜು ಕೂಡಾ ಮಾಡಿಸಿದ್ದರು. ಆದರೆ ಅದು ನಮ್ಮ ಶಕ್ತಿ ಮೀರಿದ್ದರಿಂದ ಅದು ಆಗ ಮುಂದುವರೆಯಲಿಲ್ಲ. ಆದರೆ ಮತ್ತೆರಡು ವರ್ಷಗಳಲ್ಲಿ ಅದರದೇ ಕಡಿಮೆ ಖರ್ಚಿನ ಸುಧಾರಿತ ಆವೃತ್ತಿಯನ್ನು ಕೈಗೊಂಡು, ಸಣ್ಣ ಸಭಾಗೃಹದ ನಿರ್ಮಾಣ ಯಶಸ್ವಿಯಾಗಿ ಮುಗಿಯಿತು. ಇಂದು ಅಲ್ಲಿ ಬಹಳಷ್ಟು ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತಿವೆ.

ಹಾಗೆಯೇ ಯಾರೂ ಉಪಯೋಗಿಸುತ್ತಿರದ ಬಿಲಿಯರ್ಡ್ಸ್ ಟೇಬಲ್ ಅನ್ನ ವಿಲೇವಾರಿ ಮಾಡಿ ಆ ಜಾಗದಲ್ಲಿ ಒಂದು ಹಾಲ್ ಕಟ್ಟುವ ಯೋಜನೆಯಿತ್ತು. ಟೇಬಲ್ ವಿಲೇವಾರಿ ಅವರು ಅಧ್ಯಕ್ಷಪಟ್ಟ ಬಿಟ್ಟ ನಂತರ ಅಂತೂ ಕೊನೆಗೂ ಆಯಿತು. ಆ ಜಾಗದಲ್ಲಿ ಇಂದು ನಮ್ಮ ವಾಚನಾಲಯ ಬಂದಿದ್ದು, ಸಣ್ಣ ಪುಟ್ಟ ಸಭೆಗಳಿಗೆ ಪ್ರಶಸ್ತವಾದ ಜಾಗವಾಗಿದೆ.

ಅವರಿಗೆ ನಮ್ಮ ಕಟ್ಟಡವನ್ನು ಇನ್ನೂ ಒಂದು ಅಂತಸು ಮೇಲಕ್ಕೇರಿಸುವ ಹಂಬಲವಿತ್ತು. ಕಾರಣಾಂತರಗಳಿಂದ ಈ ಆಸೆ ಕೈಗೂಡಲಿಲ್ಲ.

ಸಾಹಿತ್ಯ, ಸಂಗೀತ, ನೃತ್ಯ ಇತ್ಯಾದಿಗಳಲ್ಲಿಯೂ ಅವರಿಗೆ ಆಸಕ್ತಿ. ಸ್ವತಃ ಬೆಂಗಳೂರಿನ ಕಲಾವಿದರುಗಳಿಗೆ ಮಾತು ಕೊಟ್ಟು ಬರುತ್ತಿದ್ದರು. ಈ ವಿಷಯದಲ್ಲಿ ನಮ್ಮ ಮೀಟಿಂಗುಗಳಲ್ಲಿ ಸಾಕಷ್ಟು ಚರ್ಚೆಯಾದದ್ದೂ ಇದೆ!

ಅವರ ಅಧ್ಯಕ್ಷತೆಯಲ್ಲಿ ಅನೇಕ ಸುಧಾರಣೆಯನ್ನು ಮಾಡಿದೆವು. ನಮ್ಮ ಹೊಸ website ಕೊನೆಗೂ ಸಾಕಾರವಾದಾಗ ಅವರಿಗೆ ಬಹಳ ಸಂತೋಷವಾಗಿತ್ತು. ಅಂತೆಯೇ ನಮ್ಮ ಸಂಸ್ಥೆಗೆ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಕಷ್ಟ ಉತ್ಪನ್ನವಾದಾಗ ಅವರು ತೋರಿಸಿದ ಕಾಳಜಿ ಅಪೂರ್ವವಾದದ್ದು. ನಮ್ಮ ತಿಂಗಳ ಮೀಟಿಂಗುಗಳಿಗೆ ಪೂರ್ವಭಾವಿಯಾಗಿ, ತಿಂಗಳ ವರದಿಯನ್ನು ಓದಿಕೊಂಡು ಟಿಪ್ಪಣಿ ಮಾಡಿಕೊಂಡು ಬರುತ್ತಿದ್ದರು.

ಮೊದಲೇ ಹೇಳಿದಂತೆ Project Construction ವೃತ್ತಿಯಲ್ಲಿದ್ದವರಿಗೆ ಯಥಾಸ್ಥಿತಿಯ ಬಗ್ಗೆ ಸಮಾಧಾನವಿರುವುದಿಲ್ಲ. ಅವರಲ್ಲಿ ಪ್ರತಿದಿನವೂ ಬದಲಾವಣೆ ಮಾಡುವ, ಹಂತ ಹಂತವಾಗಿ ಕಟ್ಟುವ ತುಡಿತವಿರುತ್ತದೆ. ಶ್ರೀರಾಮಭದ್ರರ ಅಂಥಾ ತುಡಿತದಿಂದ ಅಸೋಸಿಯೇಷನ್ನಿನಲ್ಲಿ ಬಹಳಷ್ಟು ಸುಧಾರಣೆಗಳು ಆಚರಣೆಗೆ ಬಂದವು.

ಅವರು ಆಗಾಗ ಬೆಂಗಳೂರಿಗೆ ಹೋಗಿ ಬರುವುದು ಸಹಜವಾಗಿತ್ತು. ಹಾಗೆಯೇ ಮತ್ತೆ, ಅದೇ ಉತ್ಸಾಹದಲ್ಲಿ ವಾಪಸ್ಸು ಬರುವುದೂ ಕೂಡಾ. ಆದರೆ ಈ ಬಾರಿ ಬೆಂಗಳೂರಿಗೆ ಹೋದವರು ಬರಲೇ ಇಲ್ಲ. ವಿಧಿ ಅವರನ್ನು ಎಳೆದುಕೊಂಡು ಬಿಟ್ಟಿತು. ಇದು ನಮ್ಮ ದೌರ್ಭಾಗ್ಯ.

ಅವರ ಕುಟುಂಬದವರೂ ಅದರಲ್ಲಿಯೂ ನಮ್ಮೆಲ್ಲರೊಂದಿಗೆ ಯಾವುದೇ ಹಮ್ಮು ಬಿಮ್ಮುಗಳಿಲ್ಲದೆ ಒಡನಾಟದಲ್ಲಿದ್ದ ಅವರ ಶ್ರೀಮತಿಯವರಿಗೆ, ಭಗವಂತ ಈ ದುಃಖವನ್ನು ಮೀರಿ ನಿಲ್ಲುವ ಶಕ್ತಿ ಕೊಡಲಿ ಎಂದು ಆಶಿಸುತ್ತಾ, ಅವರ ಆತ್ಮಕ್ಕೆ ನನ್ನ ಈ ನುಡಿನಮನ.

– ನಾರಾಯಣ ನವಿಲೇಕರ್

# ಮಧ್ಯಮವರ್ಗದ ಚರಿತ್ರೆಯನ್ನು ಹೇಳುವ ಕಾವ್ಯ; ಮೈಸೂರು ಮಲ್ಲಿಗೆ - ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ





ಕೆ. ಎಸ್. ನರಸಿಂಹಸ್ವಾಮಿಯವರು ನವೋದಯ, ನವ್ಯ ಪಂಥಗಳಿಗೆ ತಮ್ಮನ್ನು ಸೇರಿಸಿಕೊಳ್ಳದೆ ಭಿನ್ನವಾಗಿ ಬರೆದವರು. ಕೆ.ಎಸ್.ನ ಅವರು ಸಂಯಮಿ ಮತ್ತು ಸ್ವತಂತ್ರ ಬರಹಗಾರರು. ಶ್ರೇಷ್ಠವಾದ ಎಲ್ಲ ಕಾವ್ಯಗಳು ಜನಪ್ರಿಯವಾಗುವುದಿಲ್ಲ ಹಾಗೇನೇ ಜನಪ್ರಿಯವಾದ ಕಾವ್ಯಗಳು ಶ್ರೇಷ್ಠವಾದವುಗಳು ಅನ್ನುವ ಹಾಗಿಲ್ಲ. ಆದರೆ ಕೆ. ಎಸ್.ನ ಅವರ ಕಾವ್ಯ ಶ್ರೇಷ್ಠತೆ ಮತ್ತು ಜನಪ್ರಿಯತೆ ಎರಡನ್ನೂ ಪಡೆದಿದ್ದವು ಎನ್ನುವುದನ್ನು ಗಮನಿಸಬೇಕಾದದ್ದು ಎಂದು ನಾಡಿನ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ನುಡಿದರು. ಅವರು ದಿನಾಂಕ ಮಾರ್ಚ್ 28ರಂದು ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯವು ಜಂಟಿಯಾಗಿ ಹಮ್ಮಿಕೊಂಡ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಕೆ.ಎಸ್. ನರಸಿಂಹಸ್ವಾಮಿಯ ಅವರ ಕಾವ್ಯದ ಕುರಿತು ಮಾತನಾಡಿದರು.

ಕೆ. ಎಸ್. ನ ಅವರು ವಿಮರ್ಶಕರ ಮನ್ನಣೆಯನ್ನು ಪಡೆದ (ಪುಟ 9ಕ್ಕೆ)

# ಮೊಗವೀರ ಪತ್ರಿಕೆ - ಒಂದು ಅಧ್ಯಯನ

ಮೊಗವೀರ ಪತ್ರಿಕೆ – ಒಂದು ಅಧ್ಯಯನ ಇದು ಜಿ.ಪಿ.ಕುಸುಮಾರವರ ಎಂ.ಫಿಲ್ ಸಂಪ್ರಬಂಧವಾಗಿದೆ. ಇವರು ಮುಂಬಯಿಯ ಸೆಶನ್ಸ್ ಕೋರ್ಟಿನಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಮೊಗವೀರ ಪತ್ರಿಕೆಯ ಸಂಪಾದಕಿಯಾಗಿ ದುಡಿದು ಅನೇಕ ಸಂಪಾದಕೀಯ ಬರಹಗಳನ್ನು ರಚಿಸಿದ್ದಾರೆ.

ಪ್ರಸ್ತುತ ಕೃತಿಯು ಒಂಭತ್ತು ಅಧ್ಯಾಯಗಳಿಂದ ಕೂಡಿದೆ. ಮೊಗವೀರ ಮಾಸಿಕ ಪತ್ರಿಕೆ ಮುಂಬಯಿಯಲ್ಲಿ ಹುಟ್ಟಿ ಅಭಿವೃದ್ಧಿ ಹೊಂದಿದ ರೀತಿಯನ್ನು ಕೃತಿಯಲ್ಲಿ ತಿಳಿಸಿದ್ದಾರೆ.

ಮೊಗವೀರ ಜನಾಂಗದ ವೃತ್ತಿ, ಸಮಸ್ಯೆ, ಪರಿಹಾರೋಪಾಯ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ತನ್ನ ನೆಲೆಯಲ್ಲಿ ರಾಷ್ಟ್ರಕಟ್ಟುವ, ನುಡಿ ಬೆಳೆಸುವ, ಜನಾಂಗದ ಕಾಳಜಿಯನ್ನು ಲಕ್ಷಿಸಿ ಸಮಸ್ಯೆ ನಿವಾರಣೆಯಂತಹ ಜವಾಬ್ದಾರಿ ಹೊತ್ತ ಅನೇಕ ಲೇಖನಗಳು 'ಮೊಗವೀರ ಪತ್ರಿಕೆಯಲ್ಲಿ ಬಂದಿವೆ. ಮೊಗವೀರ ಸ್ತ್ರೀಯರ ಸಂಕಷ್ಟ, ಕರ್ತವ್ಯ, ಹೆಣ್ಣು ಮಕ್ಕಳ ವಿದ್ಯಾಭ್ಯಾಸ, ಸಮಾಜದಲ್ಲಿ ಮಹಿಳೆಯ ಸ್ಥಾನಮಾನ, ಸುಶಿಕ್ಷಿತ ಮಹಿಳೆ ಮತ್ತು ಉದ್ಯೋಗಗಳ ಕುರಿತ ಲೇಖನಗಳು ಬೆಳಕು ಕಂಡಿವೆ. ಓದುಗರಿಗೆ ಹೊಸ ದಿಗಂತವನ್ನು ತೋರಿದ ಪತ್ರಿಕೆ 'ಮೊಗವೀರ' ಪತ್ರಿಕೆಯಾಗಿರುವುದರಿಂದ ಇದರ ಅಧ್ಯಯನ ಅಗತ್ಯ ಎಂದು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಕರಗಳ ಚರ್ಚೆಯನ್ನು ಮೊದಲ ಅಧ್ಯಾಯದಲ್ಲಿ ಹೇಳಿದ್ದಾರೆ ಕವಿ.

ಮೊಗವೀರರು ಬೆಳೆದು ಬಂದ ರೀತಿ, ಅವರ ಸಾಂಪ್ರದಾಯಿಕ ಮೀನುಗಾರಿಕೆ 'ರಂಪಣಿ'ಯ ವಿವರ. ಗ್ರಾಮಸಭಾ ಮತ್ತು ಮೂಲಸ್ಥಾನ ಸಭಾಗಳ ವಿವರ, ಮುಂಬಯಿಯಲ್ಲಿರುವ ಗ್ರಾಮಸಭಾ ಮತ್ತು ಮೂಲಸ್ಥಾನ ಸಭಾಗಳ ಹೆಸರು, ಮುಂಬಯಿಯಲ್ಲಿ ಮೊಗವೀರ ಸಾಂಸ್ಕೃತಿಕ ಬದುಕು ಹಾಗೂ ಮೊಗವೀರ ಲೇಖಕರ ಹೆಸರನ್ನು ಎರಡನೇ ಅಧ್ಯಾಯ 'ಮೊಗವೀರರು'ನಲ್ಲಿ ತಿಳಿಸಿದ್ದಾರೆ.

ಮೂರನೇ ಅಧ್ಯಾಯವು ಮುಂಬಯಿ ನಗರದಲ್ಲಿ ತುಳುವ–ಕನ್ನಡಿಗರ ಜಾತೀಯ ಸಂಸ್ಥೆಗಳು, ಮೊಗವೀರ ಜಾತೀಯ ಸಂಘ ಸಂಸ್ಥೆಗಳು, ಮೊಗವೀರ ವ್ಯವಸ್ಥಾಪಕ ಮಂಡಳಿಯ ಉದಯದಿಂದ ಹಿಡಿದು ಶತಮಾನೋತ್ಸವವನ್ನು ಆಚರಿಸಿದ ರೀತಿ, ಮಂಡಳಿಯ ಪ್ರಮುಖ ಸಾಧನೆಗಳು ಮತ್ತು ಪ್ರಕಟಣೆಗಳ ವಿವರ, ಮಂಡಳಿಯಲ್ಲಿ ಕಾರ್ಯನಿರ್ವಹಿಸಿದ ಅಧ್ಯಕ್ಷರ ಹೆಸರನ್ನು ಒಳಗೊಂಡಿದೆ.

ನಾಲ್ಕನೇ ಅಧ್ಯಾಯವಾದ "ಮುಂಬಯಿಯಲ್ಲಿ ಕನ್ನಡ ಪತ್ರಿಕೋದ್ಯಮ"ವು ನಿಯತಕಾಲಿಕೆಗಳ ಹಿನ್ನೆಲೆ, ಮುಂಬಯಿಯಲ್ಲಿ ಕನ್ನಡ ಪತ್ರಿಕೋದ್ಯಮದ ವಿವರ, ಮುಂಬಯಿಯಲ್ಲಿ ಕನ್ನಡ ಭಾಷೆ ಬೆಳೆದ ರೀತಿ, ಮುಂಬಯಿಯ ಜಾತೀಯ ಸಂಘ–ಸಂಸ್ಥೆಗಳ ಮುಖವಾಣಿಗಳ ವಿವರ, ಮುಂಬಯಿಯಲ್ಲಿ ಹುಟ್ಟಿ ಬೆಳೆದ ಕನ್ನಡ ಪತ್ರಿಕೆಗಳ ಹೆಸರುಗಳನ್ನು ತಿಳಿಸುತ್ತದೆ.

ಐದನೇ ಅಧ್ಯಾಯದಲ್ಲಿ ಕವಿ ಪತ್ರಿಕೆಯ ಅರ್ಥ, ಅದರ ಪ್ರಕಾರಗಳು, ನಿಯತಕಾಲಿಕೆಯ ಅರ್ಥ ಮತ್ತು ವಿವರಣೆಯನ್ನು ನೀಡುತ್ತಾ ಸಾಂಘಿಕ ಮುಖವಾಣಿಯಾಗಿ 'ಮೊಗವೀರ' ಪತ್ರಿಕೆ ಬೆಳೆದ ರೀತಿಯನ್ನು ವಿವರಿಸಿದ್ದಾರೆ.

ಮೊಗವೀರ ಪತ್ರಿಕೆಯು 1939 ರ ಜುಲೈ ತಿಂಗಳಿನಿಂದ ತ್ರೈಮಾಸಿಕವಾಗಿ ಹುಟ್ಟು ಪಡೆಯಿತು ಎಂಬುದನ್ನು ತಿಳಿಸುತ್ತಾ ಪತ್ರಿಕೆ ನಡೆದು ಬಂದ ದಾರಿಯ ವಿವರವನ್ನು, ಮೊಗವೀರ ಪತ್ರಿಕೆಯ ಸುವರ್ಣ ಮಹೋತ್ಸವ ಮತ್ತು ವಜ್ರಮಹೋತ್ಸವವನ್ನು ಆಚರಿಸಿದ ರೀತಿಯನ್ನು ವಿವರಿಸುತ್ತಾ ಮುಂಬಯಿ ವಿಶ್ವವಿದ್ಯಾಲಯವು 2010ರ ಮಾರ್ಚ್‌ನಲ್ಲಿ ಮೊಗವೀರ ಪತ್ರಿಕೆಗೆ 2009–2010 ರ ಸಾಲಿನ 'ಗೌರವ ಪುರಸ್ಕಾರ' ನೀಡಿ ಗೌರವಿಸಿದೆ ಎಂಬುದನ್ನು ಜಿ.ಪಿ.ಕುಸುಮಾರವರು "ಮೊಗವೀರ" ಪತ್ರಿಕೆ ನಡೆದು ಬಂದ ದಾರಿ ಎಂಬ ಅಧ್ಯಾಯದಲ್ಲಿ ತಿಳಿಸಿದ್ದಾರೆ.

ಮೊಗವೀರ ಪತ್ರಿಕೆಯ ಧ್ಯೇಯ ಧೋರಣೆಗಳು, ಮೊಗವೀರ ಪತ್ರಿಕೆಯ ಸಾಹಿತ್ಯ ಸಮೀಕ್ಷೆಯ ವಿವರಗಳು, ಮೀನುಗಾರಿಕೆಗೆ ಸಂಬಂಧಪಟ್ಟ, ಲೇಖನಗಳ ಹೆಸರು ಮತ್ತು ಕವಿಗಳ ಹೆಸರಿನ ವಿವರ, ಮೊಗವೀರ ಜನಾಂಗದ ಬಗೆಗಿನ ಲೇಖನಗಳ ವಿವರವನ್ನು ಅಧ್ಯಾಯ ಏಳರಲ್ಲಿ ನೀಡಲಾಗಿದೆ. ಮಾತ್ರವಲ್ಲದೇ ಮಹಿಳೆಯರ ಕುರಿತಾದ ಲೇಖನಗಳ ವಿವರ, ಇತರ ವೈಚಾರಿಕ ಲೇಖನಗಳ ವಿವರ, ಮೊಗವೀರ ಕಾವ್ಯ, ಮೊಗವೀರ ಕಥೆ, ಧಾರವಾಹಿ ಕಾದಂಬರಿಗಳು, ಮೊಗವೀರ ಅಂಕಣ ಬರಹಗಳು ಹಾಗೂ 'ಮೊಗವೀರ ಪತ್ರಿಕೆಯ ಸಂಪಾದಕರು ಮತ್ತು ಸಂಪಾದಕೀಯಗಳ ವಿವರಣೆಯನ್ನು ಕವಿ ನೀಡಿದ್ದಾರೆ.

ನಾಡು–ನುಡಿಗೆ ಮೊಗವೀರದ ಕೊಡುಗೆ ಎಂಬ ಅಧ್ಯಾಯದಲ್ಲಿ ಲೇಖಕಿ ನಾಡಿನ ಕುರಿತಾದ ಲೇಖನಗಳ ಹೆಸರನ್ನು ನುಡಿಗೆ ಕುರಿತಾದ ಲೇಖನಗಳನ್ ಹೆಸರನ್ನು ನೀಡುತ್ತಾ ಲೇಖನಗಳ ವಿವರವನ್ನು ತಿಳಿಸುತ್ತಾ ಕನ್ನಡ ನಾಡು ನುಡಿಗೆ ಮೊಗವೀರ ಪತ್ರಿಕೆಯ ಕೊಡುಗೆಯನ್ನು ವಿವರಿಸಿದ್ದಾರೆ.

ಮೊಗವೀರ ಪತ್ರಿಕೆಯ ಸಂಚಿಕೆಗಳಲ್ಲಿ ಮೂಡಿ ಬಂದಿರುವ ಜನಪರ ಮೌಲ್ಯಗಳು, ಶೈಕ್ಷಣಿಕ ಸಲಹೆಗಳು, ಕನ್ನಡದ ಹಿರಿಯ ಮೇಧಾವಿಗಳ ನುಡಿಮುತ್ತುಗಳು. ಒಂದು ಸಶಕ್ತ ಪ್ರಜಾಪ್ರಭುತ್ವ ರಾಷ್ಟ್ರಕಟ್ಟುವಲ್ಲಿ, ಸಮಾಜವಾದವನ್ನು ಅನುಷ್ಠಾನಗೊಳಿಸುವಲ್ಲಿ ಪೂರಕವೆಂಬಂತೆ ಕೆಲಸ ಮಾಡಿವೆ. ಸಮುದಾಯದ ಜನರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಎತ್ತಿ ಹಿಡಿದು ಆಯಾ ಸಂದರ್ಭದಲ್ಲಿ ಹೋರಾಟಕ್ಕೆ ಮುಂದಾದ ಮೊಗವೀರ ಪತ್ರಿಕೆ ತಾಯ್ನಾಡಿನ ಮಣ್ಣಿನ ಮಕ್ಕಳ ಹೋರಾಟಕ್ಕೆ ಬೆಂಬಲವಾಗಿ, ನಾಡಿನ ಅನೇಕ ಜನಪರ ಚಳುವಳಿಯ ಸಕ್ರೀಯ ಸದಸ್ಯನಾಗಿ ಅದು ದಾಖಲಿಸಿದ ಸಾಹಿತ್ಯ ಜೀವಂತವಾದುದು ಎಂಬುದ್ದನ್ನು ತಿಳಿಸುತ್ತಾ ಒಂಭತ್ತನೇಯ ಅಧ್ಯಾಯದಲ್ಲಿ ಸಮಾರೋಪವನ್ನು ಮಾಡಿದ್ದಾರೆ ಕವಿ ಜಿ.ಪಿ.ಕುಸುಮಾ.

ಮೊಗವೀರ ಪತ್ರಿಕೆಯ ಕೆಲವು ಮುಖ್ಯಾಂಶಗಳು, ಮೊಗವೀರ ಪತ್ರಿಕೆಯ ವಿಶೇಷತೆಗಳು, ಮೊಗವೀರ ಪತ್ರಿಕೆಯ ಸಂಪಾದಕರು, ಮ್ಯಾನೇಜರ್‌ಗಳು, ಮುದ್ರಣ ಸಂಸ್ಥೆಗಳು ಮತ್ತು ಮೊಗವೀರ ಪತ್ರಿಕೆಯ ಬೆಲೆ, ಮೊಗವೀರ ವ್ಯವಸ್ಥಾಪಕ ಮಂಡಳಿಯ ಕಚೇರಿಗಳ ವಿವರಗಳನ್ನು "ಅನುಬಂಧ" ದಲ್ಲಿ ವಿವರಿಸಿದ್ದಾರೆ.

ಕನ್ನಡ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮೊಗವೀರ ಪತ್ರಿಕೆಯು ಅನೇಕ ಕಾರ್ಯಗಳನ್ನು ಕೈಗೊಂಡಿದೆ. ಕನ್ನಡ ಭಾಷೆ ಅಪಾಯದ ಅಂಚಿನಲ್ಲಿದ್ದರೂ

✍ ದೀಪಾ ಜಿ. ಪ್ರಭು

ಅದನ್ನು ಉಳಿಸಿ ಬೆಳೆಸುವಲ್ಲಿ ಮೊಗವೀರ ಪತ್ರಿಕೆಯೂ ಪ್ರಧಾನ ಪಾತ್ರ ವಹಿಸಿದೆ ಎಂಬ ಲೇಖಕಿಯ ಭಾವನೆ ನಿಜ. ಎಷ್ಟೋ ಯುದ್ಧಗಳನ್ನು ನೋಡಿ ಬಂದ ಪತ್ರಿಕೆ ಮೊಗವೀರ ಪತ್ರಿಕೆ ಅಂತಹ ದುಃಸ್ಥಿತಿಯಲ್ಲೂ ಪ್ರಕಟಗೊಂಡಿರುವ ಪತ್ರಿಕೆ ವಜ್ರಮಹೋತ್ಸವವನ್ನು ಪೂರೈಸಿರುವುದು ಹೆಮ್ಮೆಯೇ ಸರಿ ಎಂಬ ನಿಲುವು ಲೇಖಕಿಯವರದ್ದು.

ಮೊಗವೀರ ಪತ್ರಿಕೆ – ಒಂದು ಅಧ್ಯಯನ ಕೃತಿಯು ಒಳ್ಳೆಯ ಕೃತಿಯಾಗಿದ್ದು 'ಮೊಗವೀರ ಪತ್ರಿಕೆಯ 70ರ ಸಂಭ್ರಮದ ನಿಮಿತ್ತ ಪ್ರಕಟಗೊಂಡಿದೆ. ಸಮುದಾಯದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಅವರ ಜ್ಞಾನ ಕ್ಷಿತಿಜವನ್ನು ವಿಸ್ತರಿಸುತ್ತಾ ಬಲಿಷ್ಠ ಪ್ರಗತಿಪರ ಸಮಾಜವನ್ನು ಕಟ್ಟಲು ಮೊಗವೀರ ಪತ್ರಿಕೆ ವಾಹಕವಾಗಿ ಕೆಲಸ ಮಾಡಿದ ಬಗೆಯನ್ನು ವಸ್ತುನಿಷ್ಠವಾಗಿ ದಾಖಲಿಸಿದ್ದಾರೆ ಎಂದು ಡಾ. ಜಿ. ಎನ್. ಉಪಾಧ್ಯರವರು ಮುನ್ನುಡಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಕೃತಿಯ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ ಆಕರ ಗ್ರಂಥಗಳ ಹೆಸರನ್ನು ನೀಡಿರುವುದು ಒಳ್ಳೆಯ ಸಂಗತಿ. ಸುಲಭವಾದ ಸರಳವಾದ ರೀತಿಯಲ್ಲಿ ಕೃತಿಯನ್ನು ರಚಿಸಿರುವುದು ಜಿ.ಪಿ.ಕುಸುಮಾರವರ ವಿಶೇಷತೆಯಾಗಿದೆ.

"ಅನೇಕ ಹೊಸ ಹೊಸ ಸಂಗತಿಗಳನ್ನು ಮುನ್ನೆಲೆಗೆ ತಂದು ಚರ್ಚಿಸಿರುವುದು. ನೇರ ನಿರೂಪಣೆ, ಆಕರಗಳ ಸಮರ್ಪಕ ಬಳಕೆ, ಖಚಿತ ನಿಲುವು ಈ ಸಂಪ್ರಬಂಧದ ವೈಶಿಷ್ಟ್ಯ" ಎಂಬ "ಡಾ.ಸಬಿಹಾ"ರವರ ಅಭಿಪ್ರಾಯ ಅಕ್ಷರಶ: ನಿಜ. ಇಂತಹ ಒಂದು ಉತ್ತಮ ಕೃತಿಯನ್ನು ಓದುಗರಿಗೆ ನೀಡಿದ ಜಿ.ಪಿ.ಕುಸುಮಾರವರಿಗೆ ಅಭಿನಂದನೆಗಳು.

## ....ಕಾವ್ಯ; ಮೈಸೂರು ಮಲ್ಲಿಗೆ

ಕವಿ. ಜನಮಾನಸದಲ್ಲಿ ವಿಶಿಷ್ಟಮನ್ನಣೆಯನ್ನು ಪಡೆದವರು. ಕನ್ನಡದಲ್ಲಿ ಅತ್ಯಂತ ಹೆಚ್ಚು ಮರುಮುದ್ರಣ ಪಡೆದ ಕವನ ಸಂಕಲನವೆಂದರೆ ಕೆ.ಎಸ್.ನ ಅವರು ಬರೆದ ಮೈಸೂರು ಮಲ್ಲಿಗೆ ಕವನ ಸಂಕಲನ. ಈ ಕೃತಿಗೆ 50ವರ್ಷ ತುಂಬಿದ ಸಂದರ್ಭದಲ್ಲಿ ಉತ್ಸವ ಆಚರಿಸಿದ್ದು ಬಹುಶಃ ಇದು ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ನಡೆದ ದಾಖಲೆ ಎಂದು ಪರಿಗಣಿಸಬಹುದು. ಕೆ.ಎಸ್.ನ ಅವರ ಮೈಸೂರು ಮಲ್ಲಿಗೆ ಕವನ ಸಂಕಲನ ಸಿನಿಮಾ, ನಾಟಕಗಳಂತಹ ಬೇರೆ ಬೇರೆ ನೆಲೆಗಳಲ್ಲಿ ಪ್ರಭಾವಿಸಿದ್ದನ್ನು ಕಾಣಬಹುದು. ಕೆ.ಎಸ್.ನ ಅವರು ಶೃಂಗಾರವನ್ನು ಹದಗೆಡದ ರೀತಿಯಲ್ಲಿ ಬಳಸಿದ ಕವಿ. ಆಧುನಿಕ ಸಾಹಿತ್ಯದಲ್ಲಿ ಮೈಸೂರು ಮಲ್ಲಿಗೆಗೆ ಚಾರಿತ್ರಿಕ ಮಹತ್ವವಿದೆ. ಒಂದು ಸಂಧಿಕಾಲದ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ಇದು ಚಿತ್ರಿಸುತ್ತದೆ. ಸಂಪ್ರದಾಯ ಮತ್ತು ಆಧುನಿಕತೆಯ ಬದುಕಿನ ಪಲ್ಲಟವನ್ನು ಈ ಕಾವ್ಯದಲ್ಲಿ ಕಾಣಬಹುದು. ಒಂದು ಕಾಲಘಟ್ಟದ ಚರಿತ್ರೆಯನ್ನು ಕಾವ್ಯದ ಮುಖೇನ ಕಟ್ಟಿಕೊಟ್ಟವರು ಕೆ.ಎಸ್.ನ ಅವರು. ಈ ಕಾವ್ಯ ಮಧ್ಯಮವರ್ಗದ ಚರಿತ್ರೆಯನ್ನು ಹೇಳುವ ಕಾವ್ಯ. ನರಸಿಂಹಸ್ವಾಮಿಯವರಲ್ಲಿ ಪ್ರೀತಿಯೆಂಬುದು ಒಂದು ಕವಿತೆಯಲ್ಲ ಅದು ಜೀವನತತ್ವವಾಗಿತ್ತು. ಸಂಪ್ರದಾಯ ಸಹಜ ಸಂತೋಷವನ್ನು ಹತ್ತಿಕ್ಕುತ್ತದೆ. ಸಮಾಜ ಪ್ರತಿಷ್ಠೆ ಮತ್ತು ಜಾತಿಯ ಹೆಸರಿನಲ್ಲಿ ಸಂತೋಷಕ್ಕೆ ಅಡ್ಡಗಾಲನ್ನು ಇಡುತ್ತದೆ. ಆದರೆ ಪ್ರೀತಿ ಯಾವಾಗಲೂ ಜೀವಪರವಾದುದು. ಪ್ರೀತಿಯನ್ನು ಕನ್ನಡದಲ್ಲಿ ಮೊದಲಬಾರಿಗೆ ಒಂದು ಸಿದ್ಧಾಂತವಾಗಿ ಮಂಡಿಸಿದರು ಕೆ.ಎಸ್.ನ ಅವರು. ಮೊದಲಬಾರಿಗೆ ಸ್ತ್ರೀಬಂಡಾಯದ ಧ್ವನಿಯನ್ನು ನರಸಿಂಹಸ್ವಾಮಿಯವರ ಕವಿತೆಯಲ್ಲಿ ಕಾಣುತ್ತೇವೆ. ಹೆಣ್ಣಿಗೂ ಒಂದು ವ್ಯಕ್ತಿತ್ವವಿದೆ ಅಂತ ಅವರು ತೋರಿಸಿಕೊಟ್ಟಿದ್ದಾರೆ.

ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಪ್ರಾಸ್ತಾವಿಕವಾಗಿ ಮಾತನಾಡುತ್ತ, ನಾಡಿನ ಅನೇಕ ಹಿರಿಯ ಸಾಹಿತಿಗಳು ನಮ್ಮ ಈ ದತ್ತಿ ಉಪನ್ಯಾಸದಲ್ಲಿ ಪಾಲ್ಗೊಂಡಿದ್ದನ್ನು ನೆನಪು ಮಾಡಿಕೊಟ್ಟರು. ನಾಡಿನ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರನ್ನು ಸ್ವಾಗತಿಸಿ, ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಾದದ್ದು ನಮ್ಮ ಭಾಗ್ಯವೆಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ವಿದುಷಿ ಶ್ಯಾಮಲಾ ರಾಧೇಶ್ ಅವರ ಪ್ರಾಥನೆಯೊಂದಿಗೆ ಆರಂಭ ಮಾಡಲಾಯಿತು. ಡಾ. ಜ್ಯೋತಿ ಸತೀಶ್ ಕಾರ್ಯಕ್ರಮ ನಿರೂಪಿಸಿದರು, ನಾರಾಯಣ ನವಿಲೇಖರ್ ಅವರು ವಂದಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ, ಸುಮತೀಂದ್ರ ನಾಡಿಗ ಅವರು ರಚಿಸಿರುವ ಕೆ. ಎಸ್. ನರಸಿಂಹಸ್ವಾಮಿ ಕೃತಿಯನ್ನು ಡಾ. ಜೀವಿ ಕುಲಕರ್ಣಿಯವರು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್, ಕೆ. ಮಂಜುನಾಥಯ್ಯ, ಎಂ.ಎ.ಎನ್. ಪ್ರಸಾದ್, ಬಿ.ಎಸ್. ಕುರ್ಕಾಲ್, ಡಾ. ರಘುನಾಥ್, ಡಾ. ಗಿರಿಜಾಶಾಸ್ತ್ರಿ, ಶ್ರೀಮತಿ ರಜನಿ ನರಹಳ್ಳಿ. ಮೈಸೂರು ಶ್ರೀಧರ್, ಡಾ. ಮಮತಾರಾವ್, ಶ್ಯಾಮಲ ಮಾಧವ್, ಪೂರ್ಣಿಮಾ ಶೆಟ್ಟಿ, ರಮಾ ಉಡುಪ, ಮಧುಸೂದನ್, ಸುಗಂಧಾ ಸತ್ಯಮೂರ್ತಿ, ಸರೋಜಿನಿ ತರೆ, ಶೀಲಾ, ನಿರಂಜನ್ ಸಿ. ಎಸ್, ಶಿವರಾಜ್, ಪರಸಪ್ಪ ಮೊದಲಾದವರು ಉಪಸ್ಥಿತರಿದ್ದರು. □

## MATRIMONIAL

Alliance Invited from well educated and well settled working Kannada Brahmin Boy (Mumbai Preferred) for 24 year 5' 4". Girl: MSC, Kaushik Gotra, Smartha Brahmin well settled in Mumbai
Contact: Mr. Prakash Begoor-9223507003
Email : psbegoor@tatapower.com

## OBITUARY



**Smt. Kumadamma** was married to Shri N.S. Sarvottam. Sarvottam migrated from Mandya to Mumbai in the early 1953. He worked with A.E.C. operated in Mumbai by late Shri R.D. Char. He was active member of Mysore Assoication. His family always remembers Masala Dosa being Masala Dosa prepared at Association on Sundays. He was regular member of cards section & participated in all activities of Association. He was the President of the Association between 1959-1960.

Shri Sarvottam passed away in the year 1986. Shri Sarvottam was a senior member of Mysore Association. Smt Kumadamma left for her hevenly abode on 5th March 2015. She was very interested in the cultural activites at the Association.

She was 98 years when she pass away.

She had five children, Three Sons and Two daughters. Late Smt. Kumadamma was staying with her second son Shri Jagannath in Devi Nivas in Sion.

We the members of the Managing committee and Members pray the departed soul rest in peace.

***



**Shri.Vittal Rao** was one of the Senior most Life Member of Mysore Assoication. More than 40 years. He was working with Central Rly./Konkan Rly. He was a very humble person. He passed away on 22nd March 2015. We the members of the Managing committee and Members pray the departed soul rest in peace.

***



**G. V. Jannah** was one of the earliest members of the Mysore Association and had seen the Association growing through all its stages. He shifted to Bangalore after retirement in 1988. He lived to complete a century and was honoured by the Shanmukhananda Sangeeta Sabha, Mumbai on his 100th Birthday. He was very much interestd in dance and music. Shree Rajarajeshwari Natya Mandir regularly organizes an event in his name at the Association every year. He had donated a large number of books to the Association library.

Mr. Jannah passed away on March 26th, 2015 at the age of 101 years. The Association expresses its condolences to the bereaved family and prays for the departed soul to rest in peace.

## Hindustani Flute Recital at Mysore Association



Pt. Nash Naubert, a US citizen presented flute recital programme at The Mysore Association Mumbai under its Monthly programme on Saturday 4th April, 2015 at 7.00 p.m. Ustad Allauddin Khan the pioneer of 'Maihar Gharana' practiced Indian classical music under the reign of Maharaja of Maihar in Madhya Pradesh. He did his 'Sangeet Yajna' at Sharada Temple of Maihar and was also well versed in playing many types of musical instruments. In his initial life he was a music composer to Pandit Uday Shankar. Gurumatha Annapurnadevi and Ali Akbarkhan were his desciples Gurumatha Annapurna Devi, a well known Guru in Classical Instrumental music and is been listed with other well renowned musicians like Pt. Hariprasad Chaurasia , Pt. Nityanand Haldipur and Pt. Raghunath Seth and so on. Ustad Ali Akbarkhan settled in U.S. and became a rage amongst the music lovers.

Pt. Nash Naubert who nourished under the wings of Pt. Hariprasad Chaurasia for the past 6 years, after having trained under the Gurus Dr. Prahlad Nath and Pt. Harsh Wardan. He presented Rag 'Vachaspati' with divine 'Alapa' followed by Rag 'Bhageshri' and



'Bhajan Malika' of 'Payoje maine...', 'Vaishnav Janato...' and' Ragupati Ragava...' . The recital was concluded by a Dhun in' Rag Pilu'. Pt.Nash Naubert was accompanied by Pt. Amit Mishra on Tabla, a disciple of Pt.Kishor Mishra of Benars Gharana. The audiance appreciated the programme with thunderous applause.

**- NEELKANT MEDAR**

## ಮೈಸೂರು ಅಸೋಸಿಯೇಷನ್ ಮತ್ತು ಮುಂಬಯಿ ವಿ.ವಿ ಇವರ ಸಂಯುಕ್ತ ಆಶ್ರಯದಲ್ಲಿ ಎರಡು ಕೃತಿಗಳ ಬಿಡುಗಡೆ

ಕನ್ನಡ ವಿಭಾಗ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಎರಡು ಕೃತಿಗಳು ಬಿಡುಗಡೆಯಾದವು.



ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ ಕನ್ನಡ ಕಲಿಯೋಣ ಬನ್ನಿ ಇ-ಬುಕ್ ಹಾಗೂ ಎಂ. ಎನ್. ಪ್ರಸಾದ್ ಅವರ ಸುಮ-ಸಂಚಯ ಕೃತಿಗಲನ್ನು ಕ್ರಮವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಮಹಾಮಂಡಲದ ಸಂಚಾಲಕ, ಖ್ಯಾತ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ ಹಾಗೂ ಆಕೃತಿ ಫಾಂಟ್‌ನ ಮುಖ್ಯಸ್ಥ ಮೈಸೂರು ಶ್ರೀಧರ್ ಅವರು ಬಿಡುಗಡೆಗೊಳಿಸಿದರು.

ಎಂ.ಎನ್.ಪ್ರಸಾದ್ ಅವರ ಕೃತಿಯ ಕುರಿತು ಖ್ಯಾತ ನಾಟಕಕಾರ ಡಾ. ಬಿ. ಆರ್. ಮಂಜುನಾಥ್ ಅವರು ಮಾತನಾಡುತ್ತಾ ಇದೊಂದು ವಿಶಿಷ್ಟ ಕೃತಿ. ಇಲ್ಲಿ ವಿವಿಧ್ಯಮಯವಾದ ಲೇಖನಗಳಿವೆ. ಪ್ರವಾಸ ವರ್ಣನೆ ಇದೆ, ಕಥೆಯಿದೆ, ಕಾವ್ಯವಿದೆ. ಅನುವಾದ, ವ್ಯಕ್ತಿಚಿತ್ರ, ಸಂದರ್ಶನ, ಆರೋಗ್ಯ ಹೀಗೆ ಪ್ರಬುದ್ಧ ಮನಸ್ಸೊಂದು ಎಲ್ಲಾ ವಿದ್ಯಮಾನಗಳಿಗೆ ಸ್ಪಂದಿಸಿದ ಬಗೆಯಲ್ಲಿ ಸೊಗಸಾಗಿ ದಾಖಲಿಸಲಾಗಿದೆ. ಬದುಕು ಸಾರ್ಥಕವಾಗುವ, ಸಮೃದ್ಧವಾಗುವ ಕಡೆಗೆ ಲೇಖಕರು ಗಮನಹರಿಸಿರುವುದು ಗಮನೀಯ ಅಂಶ ಎಂದು ಅಭಿಪ್ರಾಯ ಪಟ್ಟರು.

ಕನ್ನಡ ಕಲಿಯೋಣ ಬನ್ನಿ ಇ-ಬುಕ್ ಬಿಡುಗಡೆ ಮಾಡಿದ ಮೈಸೂರು ಶ್ರೀಧರ್ ಮಾತನಾಡುತ್ತಾ, ಆಕೃತಿ ಹೆಚ್ಚು ಹೆಚ್ಚು ಇ-ಬುಕ್‌ಗಳನ್ನು ಹೊರತರಲು ಪ್ರಯತ್ನಿಸುತ್ತಿದೆ. ಕನ್ನಡವನ್ನು ಸರಳವಾಗಿ, ಸುಲಭವಾಗಿ ಸ್ವಯಂ ಬೋಧಿನಿಯಂತೆ ಕಲಿಯಲು ಇದು ಉಪಯುಕ್ತವಾಗಿದೆ. ಇ-ಬುಕ್‌ನಿಂದ ಕಡಿಮೆ ಖರ್ಚಿನಲ್ಲಿ ಪರಿಸರ ಸ್ನೇಹಿಯಾಗಿ ಕೃತಿಗಳನ್ನು ಹೊರ ತರಲು ಸಾಧ್ಯ ಎಂದವರು ಅಭಿಪ್ರಾಯ ಪಟ್ಟರು.

ಅಭಿಜಿತ್ ಪ್ರಕಾಶನದ ಸಂಚಾಲಕ ಡಾ. ಜಿ. ಎನ್. ಉಪಾಧ್ಯರವರು ಪ್ರಸ್ತಾವಿಕವಾಗಿ ಮಾತನಾಡುತ್ತಾ ಮುಂಬೈಯಲ್ಲಿ ಸಾಹಿತ್ಯ ಕೃಷಿಗೆ ವಿಪುಲ ಅವಕಾಶವಿದೆ. ಅವರಿಗೆ ವೇದಿಕೆ ಕಲ್ಪಿಸುವ ಅವಕಾಶವನ್ನು ಅಭಿಜಿತ್ ಪ್ರಕಾಶನ ಮಾಡುತ್ತಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷೆ ಕೆ. ಕಮಲಾ, ಮಂಜುನಾಥಯ್ಯ, ರಜನಿ ನರಹಳ್ಳಿ, ಡಾ. ಜಿ. ವಿ. ಕುಲಕರ್ಣಿ, ಡಾ. ರಘುನಾಥ್, ಬಿ. ಎಸ್. ಕುರ್ಕಾಲ್, ಶ್ಯಾಮಲಾ ಮಾಧವ್, ಡಾ. ರೇಖಾ ಎನ್. ವಿ., ಡಾ. ಲೀಲಾ, ಡಾ. ಮಮತಾ ರಾವ್, ಭಾರತಿ ಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು. ಪೂರ್ಣಿಮಾ ಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು, ಡಾ. ಜ್ಯೋತಿ ಸತೀಶ್ ಅವರು ವಂದಿಸಿದರು.

# ಮೈಸೂರು ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷ ಶ್ರೀ ವಿ. ರಾಮಭದ್ರ ಅವರಿಗೆ ಶ್ರದ್ಧಾಂಜಲಿ



*ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷ ವಿ. ರಾಮಭದ್ರರವರ ಶ್ರದ್ಧಾಂಜಲಿ ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ನಾರಾಯಣ ಜಾಗೀರ್‌ದಾರ್ ಮಾತನಾಡುತ್ತಿರುವುದು.*

ಮುಂಬಯಿಯ ಹೆಸರಾಂತ ಕನ್ನಡ ಸಂಸ್ಥೆಗಳಲ್ಲಿ ಒಂದಾದ ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಆರು ವರ್ಷಗಳ ಕಾಲ ಅದನ್ನು ಅತ್ಯಂತ ಪ್ರೀತಿ, ಅಭಿಮಾನ ಹಾಗೂ ನಿಷ್ಠೆಯಿಂದ ಸಕ್ಷಮವಾಗಿ ಮುನ್ನೆಡಿಸಿಕೊಂಡು ಬಂದಿದ್ದು, ಕಳೆದ ವರ್ಷವಷ್ಟೆ ತಮ್ಮ ಸ್ಥಾನವನ್ನು ತೆರವು ಮಾಡಿ ನಿವೃತ್ತರಾಗಿದ್ದ ಶ್ರೀ ವೆಂಕಟೇಶ್ ರಾಮಭದ್ರ ಅಯ್ಯಂಗಾರ್ ಅವರು ಮಾರ್ಚ್ 29, 2015 ರಂದು ತೀರ ಆಕಸ್ಮಿಕವಾಗಿ ನಿಧನ ಹೊಂದಿದ್ದು ಎಲ್ಲ ಕನ್ನಡ ಭಾಂದವರಿಗೂ ಬಹಳ ವಿಷಾದವನ್ನುಂಟುಮಾಡಿದೆ.

ಶ್ರೀ ರಾಮಭದ್ರ ಅವರು 1937ರಲ್ಲಿ ಜನ್ಮತಾಳಿದ್ದು ಬೆಂಗಳೂರಿನಲ್ಲಿ. ತಮ್ಮ ತಾತ ಮಾಸ್ತಿಯವರ (ಅವರ ತಾಯಿ ಮಾಸ್ತಿಯವರ ಎರಡನೆಯ ಮಗಳು) ಒಡನಾಟದಲ್ಲೇ ಬಾಲ್ಯವನ್ನು ಕಳೆದವರು. ಹೀಗಾಗಿ ಸಹಜವಾಗಿ ಅವರಿಗೆ ಆಗಿನ ಎಲ್ಲ ಕನ್ನಡ ಸಾಹಿತಿಗಳನ್ನೂ ಹತ್ತಿರದಿಂದ ನೋಡುವ, ಒಡನಾಡುವ ಅವಕಾಶ ಲಭಿಸಿತ್ತು ಹಾಗೂ ಸಾಹಿತ್ಯದಲ್ಲಿ ಆಸಕ್ತಿ ಮೂಡಿತ್ತು. ಮುಂದೆ ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಿವಿಲ್ ಎಂಜಿನಿಯರ್ ಆಗಿ ಪದವೀಧರಾಗಿ ಮುಂಬಯಿಯ ಪ್ರಖ್ಯಾತ ಸಂಸ್ಥೆಯಾದ ಹಿಂದುಸ್ತಾನ್ ಕನ್‌ಸ್ಟ್ರಕ್ಷನ್ ಕಂಪನಿ (ಎಚ್.ಸಿ.ಸಿ) ಯನ್ನು ಸೇರಿದರು. 38 ವರ್ಷ ಸತತ ಸೇವೆಯ ನಂತರ 1998 ರಲ್ಲಿ ಅಲ್ಲಿಯ ಉಪಾಧ್ಯಕ್ಷರಾಗಿ ನಿವೃತ್ತರಾದರು. 2004 ರವರೆಗೆ ಅಂತರಾಷ್ಟ್ರೀಯ ಕನ್‌ಸಲ್‌ಟೆಂಟ್ಸ್ ಮತ್ತು ಟೆಕ್ನೋಕ್ರ್ಯಾಟ್ಸ್ ಸಂಸ್ಥೆಯಲ್ಲಿ ಪ್ರಮುಖರಾಗಿ ಸೇವೆ ಸಲ್ಲಿಸಿದರು. ಭಾರತ ದೇಶದಲ್ಲಿ ಹಾಗೂ ಅನೇಕ ಹೊರದೇಶಗಳಲ್ಲಿ ಮುಖ್ಯವಾಗಿ ಆಫ್ರಿಕ ಹಾಗೂ ಮಧ್ಯ ಏಷ್ಯಾ ರಾಷ್ಟ್ರಗಳಲ್ಲಿ ಸಾರಿಗೆ ಸಂಚಾರಕ್ಕೆ ಸಂಬಂಧಿಸಿದಂತೆ ಬ್ರಿಡ್ಜ್, ರೇಲ್ವೆ, ರಸ್ತೆ (ರಾಜ ಮಾರ್ಗಗಳು) ಗಳನ್ನು ಕಟ್ಟಿ ನಿಲ್ಲಿಸುವಲ್ಲಿ ಶ್ರೀ ರಾಮಭದ್ರ ಅವರ ಕೊಡುಗೆ ಅಪಾರವಾಗಿದೆ. IIFS ಸಂಸ್ಥೆಯಿಂದ ಅವರ ಈ ಎಲ್ಲ ಕೊಡುಗೆಗಳಿಗೆ ಸನ್ಮಾನವಾಗಿ "ಭಾರತ ಜ್ಯೋತಿ" ಎಂಬ ಗೌರವ ಸಂದಿತ್ತು.

ರಾಮಭದ್ರ ಅವರು ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರಾದ ನಂತರ ಅನೇಕ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಅಲ್ಲದೆ ಅವರು ಕನ್ನಡದ ಇತರ ಸಂಘ–ಸಂಸ್ಥೆಗಳ ಸಹಕಾರದಲ್ಲಿಯೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾವೆಲ್ಲ ಕನ್ನಡಿಗರೂ ಒಂದೇ ಎಂಬ ಭಾವ ಎಲ್ಲರಲ್ಲಿಯೂ ಇರಬೇಕು, ಕನ್ನಡವನ್ನೂ, ಕನ್ನಡ ಸಂಸ್ಕೃತಿಯನ್ನೂ ಉಳಿಸಿ ಬೆಳಸಬೇಕು ಎಂದು ಹೇಳುತ್ತಿದ್ದರು.

ಶ್ರೀ. ರಾಮಭದ್ರ ಅವರು ಮಾಸ್ತಿ ವೆಂಕಟೇಶಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್‌ಗೂ ಕೂಡ ಅಧ್ಯಕ್ಷರಾಗಿದ್ದರು. ಅವರು ಮಾಸ್ತಿಯವರ ಸಾಹಿತ್ಯವನ್ನು ಎಲ್ಲೆಡೆ ಪ್ರಚಲಿತವಾಗಿಡಲು ಬಹಳಷ್ಟು ಕೆಲಸ ಮಾಡಿದ್ದರು. ಮಾಸ್ತಿಯವರ ಹೆಸರಿನಲ್ಲಿ ವಾರ್ಷಿಕ ಸಮ್ಮೇಲನಗಳನ್ನು ಮಾಡಿ ಕನ್ನಡದ ಎಲ್ಲ ಸಾಹಿತಿಗಳನ್ನು ಆದರಿಸಿದ್ದರು. ಈ ವರ್ಷ ಜೂನ್ 6ರಂದು ಮಾಸ್ತಿಯವರ 125ನೇ ವರ್ಷದ ಜಯಂತಿಯನ್ನು ಬಹಳ ವಿಶೇಷವಾಗಿ ಆಚರಿಸಲು ನಿರ್ಧರಿಸಿದ್ದರು. ನಮ್ಮ ದುರಾದೃಷ್ಟ, ಅವರು ಅದಕ್ಕೂ ಮೊದಲೇ ನಮ್ಮನ್ನು ಅಗಲಿದ್ದಾರೆ.

ತಾ. 29.03.2015 ರಂದು ಮೈಸೂರು ಅಸೋಸಿಯೇಶನ್‌ನಲ್ಲಿ ಸಂಜೆ 6.00 ಗಂಟೆಗೆ ಸಂತಾಪ ಸೂಚಕ ಸಭೆ ಕರೆಯಲಾಗಿತ್ತು. ಅಧ್ಯಕ್ಷೆ ಕೆ. ಕಮಲಾ ಅವರು ಮಾತನಾಡುತ್ತ, "ರಾಮಭದ್ರ ಅವರದ್ದು ಅದಮ್ಯ ಉತ್ಸಾಹ, ಎಲ್ಲ ಚಟುವಟಿಕೆಗಳ ಮುಂದಾಳಾಗಿರುತ್ತಿದ್ದರು. ಇನ್ನಷ್ಟು ವರ್ಷ ಅವರು ನಮ್ಮೊಡನಿದ್ದಿದ್ದರೆ ಚೆನ್ನಿತ್ತು. ನಮಗೆ ಹಿರಿಯರಾದ ಅವರ ಮಾರ್ಗದರ್ಶನದಿಂದ ಬಹಳ ಸಹಾಯವಾಗುತ್ತಿತ್ತು. ಇದು ತುಂಬಲಾರದ ನಷ್ಟ" ಎಂದು ನುಡಿದರು.

ಡಾ. ಬಿ. ಆರ್. ಮಂಜುನಾಥ್ ಅವರು ಶ್ರೀ ರಾಮಭದ್ರ ಅವರ ನೇರ ನಡೆನುಡಿಯ ಸ್ವಭಾವ ಹಾಗೂ ನಿರ್ಧರಿಸಿದ ಕಾರ್ಯ ಸಾಧಿಸುವ ಛಲವನ್ನು ಸ್ಮರಿಸಿದರು. ಶ್ರೀ ಮಂಜುನಾಥಯ್ಯ ಅವರು ಮೈಸೂರು ಅಸೋಸಿಯೇಶನ್ ಬಗ್ಗೆ ಶ್ರೀ ರಾಮಭದ್ರ ಅವರಿಗಿದ್ದ ಪ್ರೀತಿ, ಅಭಿಮಾನವನ್ನೂ, ಅವರ ವಿಶ್ವಾಸಪೂರ್ವಕ ನಡುವಳಿಕೆಯನ್ನೂ ನೆನಪಿಸಿಕೊಂಡರು. ಕಾರ್ಯದರ್ಶಿ ಡಾ. ವೈ.ಡಿ. ವೆಂಕಟೇಶ್ ಅವರು ರಾಮಭದ್ರ ಅವರ ಉತ್ಸಾಹ ಹಾಗೂ ಸ್ನೇಹವನ್ನು ಮೆಚ್ಚುತ್ತಾ 'ಮೈಸೂರು ಅಸೋಸಿಯೇಶನ್ ಇರುವವರೆಗೂ ರಾಮಭದ್ರ ಅವರು ಇರುತ್ತಾರೆ' ಎಂದು ಭಾವುಕರಾಗಿ ನುಡಿದರು. ಸಹ ಕಾರ್ಯದರ್ಶಿ ನವಿಲೇಕರ್ ಮಾತನಾಡುತ್ತಾ ಅವರು ಭಾವಜೀವಿ, ಅನೇಕ ಕನಸುಗಳನ್ನಿಟ್ಟು ಕೊಂಡಿದ್ದರು. ಅವರ ಜೀವಿತದಲ್ಲೇ ಅಸೋಸಿಯೇಶನ್ ಕಟ್ಟಡ ಹೊಸಸ್ವರೂಪವನ್ನು ಹೊಂದಿದ್ದು ಅವರಿಗೆ ಸಂತೋಷ ತಂದ ವಿಚಾರ ಎಂದು ನುಡಿದರು. ಇನ್ನೂ ಇತರ ಅನೇಕ ಸದಸ್ಯರು ಅವರ ಅಗಲಿಕೆ ತಮಗೆ ದುಃಖ ದಾಯವಾಗಿದೆ ಎಂಬ ಮಾತನ್ನು ಹೇಳಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಡಾ। ಮಂಜುನಾಥ್ ಅವರು ಶ್ರದ್ಧಾಂಜಲಿಯ ಮಸೂದೆಯನ್ನು ಬರೆದು ಓದಿದರು. ಕೊನೆಯಲ್ಲಿ ಅವರ ಭಾವಚಿತ್ರಕ್ಕೆ ನಮಿಸಿ ಶ್ರದ್ಧಾಪೂರ್ವಕವಾಗಿ ಪುಷ್ಪ ಸಮರ್ಪಿಸಿ ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ಈ ದುಃಖವನ್ನೂ ಸಹಿಸಿಕೊಂಡು ಮುಂದುವರಿಯುವ ಶಕ್ತಿಯನ್ನೂ ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸಲಾಯಿತು.

## Forthcoming Programmes:

Tuesday 21.04.2015
at 5.30p.m. onwards
**"Akshaya Tritiya"**
Pooja and Prasada Viniyoga

on the **Ganapati**
**installation day celebration**



❀ ❀ ❀

Saturday, 16th May
and 17 May, 2015
at 6.30 p.m.
**Kannada Theatre Festival**

Date of Publication : 10th of every month RNI No. 040015 / 83
MNE / 93 / 2015-17 Date of Posting: 10/11th of every month at Mumbai
Patrika Channel Sorting Office G.P.O.

## 'ಪಾಕಶಾಸ್ತ್ರ ಪ್ರಾವೀಣ್ಯ ಸ್ಪರ್ಧೆ'



ಪಾಕಶಾಸ್ತ್ರ ಪ್ರಾವೀಣ್ಯ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಶ್ರೀಮತಿ ಪೂರ್ಣಿಮಾ ನಾಯ್ಕ್ ಅವರು ಅಧ್ಯಕ್ಷರಿಂದ ಬಹುಮಾನ ಸ್ವೀಕರಿಸಿದರು.

ಅಂತ ಹೇಳಿದರು. ಅತಿ ಸಂಯಮದಿಂದ ಮನೆಯನ್ನು ಮಕ್ಕಳನ್ನು, ನೆರೆಹೊರೆಯವರನ್ನು, ನೆಂಟರನ್ನು, ವ್ಯವಹಾರಗಳನ್ನು ಹಬ್ಬ ಹರಿದಿನ ಇತ್ಯಾದಿ ತೂಗಿಸಿಕೊಂಡು, ಎಲ್ಲಿಯೂ ಲೋಪ ಬರದ ಹಾಗೇ ನೋಡಿಕೊಳ್ಳುವ ಶಕ್ತಿ ತಾಯಿಗಲ್ಲದೆ ಮತ್ಯಾರಿಗಿದೆ ಅಂತ ಕೇಳಿದರು. ನಂತರ ಸೌ॥ ಶ್ಯಾಮಲಾ ರಾಧೇಶ್ ಅವರಿಂದ ಹಾಡುಗಾರಿಕೆ ಕಾರ್ಯಕ್ರಮ ಎಲ್ಲರನ್ನು ರಂಜಿಸಿತು. ಪುಟಾಣಿ ಚಿ॥ ಸುಶಾಂತ್ ಪೂಜಾರಿ ಯಕ್ಷಗಾನದ ಹಾಡು ಹಾಡಿ ಎಲ್ಲರ ಮನಸೂರೆ ಗೊಂಡನು. ಶ್ರೀಮತಿ ರಮಾ ವಸಂತ ವಂದನಾರ್ಪಣೆ ಹೇಳಿದರು.



ಸಾಂಸ್ಕೃತಿಕ ಉಡುಪಿನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀ ಸುಧಾಕರ ಪೂಜಾರಿ ಅವರು ಅಧ್ಯಕ್ಷರಿಂದ ಬಹುಮಾನ ಸ್ವೀಕರಿಸಿದರು.



ಶ್ರೀಮತಿ ಮತ್ತು ಶ್ರೀ ಪಿ. ಕೆ. ಸಾಲ್ಯಾನ್ ದಂಪತಿಯವರ ವೈವಾಹಿಕ ಜೀವನದ ಸುವರ್ಣ ಮಹೋತ್ಸವದ ಸಂದರ್ಭ ಅಸೋಸಿಯೇಶನ್‌ನ ಪದಾಧಿಕಾರಿಗಳು ಹೂ ಗುಚ್ಛ ನೀಡಿ ಸತ್ಕರಿಸಿದರು.

ಕರ್ನಾಟಕ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಇದರ 10ನೇ ಕನ್ನಡ ಸಾಹಿತ್ಯ ಸಮಾವೇಶದ ಅಂಗವಾಗಿ ಶ್ರೀಮತಿ ಟಿ.ಎಸ್. ಸತ್ಯವತಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವು ತಾ. 03.04.2015ರಂದು ಅಸೋಸಿಯೇಶನ್ ಸಭಾಗೃಹದಲ್ಲಿ ಜರಗಿತು.



### ಅವನ ಹೆಂಡತಿ

ನನ್ನ ಹೆಂಡತಿಯೆಲ್ಲಿ ಎಂದು ನೀ ಕೇಳಿದರೆ
ನಾ ಹೇಳಲೇಬೇಕು ಅವಳ ವಾಚ್‌ಮನ್ ಅಲ್ಲ
ಗೆಳೆಯಾ ಯಾರು ಬಂದು ಕರೆದೊಯ್ದರೆನ್ನು
ಹೇಳಿ ಬಿಡುವೆ ನಿನಗೂ ಮಾಹಿತಿ ಇರಲೆಂದು

- ಡಾ. ಜಿ.ಡಿ. ಜೋಶಿ

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938